ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜನವರಿ 2021
ಬೆಲೆ ರೂ. 1




## ಮಾತು ನಿಲ್ಲಿಸಿದ ಶಾಸ್ತ್ರ ಸವ್ಯಸಾಚಿ



**ಮೂಡಲಿ ಹೊಸ ಬೆಳಕು**

**ಹೊಸ ವರ್ಷ 2021ರ ಹಾರ್ದಿಕ ಶುಭಾಶಯಗಳು**




ದಿನಾಂಕ 09.12.2020ರಂದು ಭಾರತದ ನೂತನ ಸಂಸತ್ ಭವನಕ್ಕೆ ಭೂಮಿಪೂಜೆ ಮತ್ತು ಶಿಲಾನ್ಯಾಸ ಸೇರಿದಂತೆ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲು ಶೃಂಗೇರಿ ಮಠದ ಪುರೋಹಿತರು ದೆಹಲಿಗೆ ಬಂದಿದ್ದರು. ಈ ಸಂದರ್ಭದಲ್ಲಿ ಸಿ. ನಾಗರಾಜ ಅಡಿಗ ಮತ್ತು ದೆಹಲಿಯ ಶೃಂಗೇರಿ ಮಠದ ಶಾಖೆಯಲ್ಲಿರುವ ರಾಘವೇಂದ್ರ ಭಟ್ಟ, ಋಷ್ಯಶೃಂಗ ಹಾಗೂ ಇತರ ಪುರೋಹಿತರು ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿ ಸಂಘದ ಸನ್ಮಾನ ಸ್ವೀಕರಿಸಿದರು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಕಾರ್ಯಕಾರಿ ಸಮಿತಿ ಸದಸ್ಯ ಸಂತೋಷ ಜೆ., ಸಂಘದ ವ್ಯವಸ್ಥಾಪಕ ಬಾಲಚಂದ್ರ ಬಿ.ಎಸ್., ಸಂಘದ ಆಜೀವ ಸದಸ್ಯ ಶ್ರೀಹರಿ ಮತ್ತು ಖ್ಯಾತ ಚಲನಚಿತ್ರ ನಿರ್ದೇಶಕ ನಂಜುಂಡೇ ಗೌಡ ಅವರ ಪುತ್ರ ಗೌತಮ್ ಗೌಡ ಮೊದಲಾದವರು ಉಪಸ್ಥಿತರಿದ್ದರು.



ದೆಹಲಿ ಕರ್ನಾಟಕ ಸಂಘ ದಿನಾಂಕ 27.12.2020 ರಂದು ಆಯೋಜಿಸಿದ ಪದ್ಮಶ್ರೀ ಡಾ. ದೊಡ್ಡರಂಗೇಗೌಡರ ಸಾಹಿತ್ಯದ ಸಂಗೀತ ಸಂಭ್ರಮ ಕಾರ್ಯಕ್ರಮದಲ್ಲಿ ಹಿರಿಯ ಕವಿ ಡಾ. ದೊಡ್ಡರಂಗೇಗೌಡರು ವಿಡೀಯೋ ಸಂದೇಶದ ಮೂಲಕ ಭಾಗವಹಿಸಿದರು. ಚಿತ್ರದಲ್ಲಿ ಡಾ. ದೊಡ್ಡರಂಗೇಗೌಡರನ್ನು ಮಾತನಾಡಿಸಿ ವಿಡೀಯೋ ಸಂದೇಶವನ್ನು ಸಂಘಕ್ಕೆ ಒದಗಿಸಿಕೊಟ್ಟ ಸಂಘದ ಆಜೀವ ಸದಸ್ಯ ಚಿದಂಬರಕೋಟಿ ಇದ್ದಾರೆ.


**DELHI KARNATAKA SANGHA** Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ

ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳಿ ಸದಸ್ಯರು

ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷ

ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು

ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ

ಸಿ.ಎಂ. ನಾಗರಾಜ

ಕೋಶಾಧಿಕಾರಿ

ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು

ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು

ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ

ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ


ಸಂಪುಟ 31 । ಸಂಚಿಕೆ 4
ಜನವರಿ 2021


## ಸಂಪಾದಕೀಯ

# ಗೀತೆಯ ಬೆಳಕು ಆರಿ ಹೋಗದು

ಮುಗಿದು ಹೋದ ಕರಾಳ ವರ್ಷದಲ್ಲಿ ನಿತ್ಯೋತ್ಸವ ಕವಿ ಕೆ.ಎಸ್. ನಿಸಾರ್ ಅಹಮ್ಮದ್‌ರಿಂದ ತೊಡಗಿ ಅಕ್ಷರ ಬ್ರಹ್ಮ ರವಿ ಬೆಳಗೆರೆವರೆಗೆ ಸಾರಸ್ವತಲೋಕದ ಗಣ್ಯರು ಅಗಲಿದ್ದಾರೆ. ಸಾಲದೆಂಬಂತೆ ವರ್ಷದ ಕೊನೆಯಲ್ಲಿ ಹಿರಿಯ ವಿದ್ವಾಂಸ ಬನ್ನಂಜೆ ಗೋವಿಂದಾಚಾರ್ಯರು ವಿಧಿವಶರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತ ಉಭಯ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದ ಬನ್ನಂಜೆ ಗೋವಿಂದಾಚಾರ್ಯರು ನೀಡಿದ ಕೊಡುಗೆ ಅಪಾರ.

ಭಾರತದ ಪ್ರಾಚೀನ ಸಂಸ್ಕೃತಿ, ವಿವಿಧ ಧರ್ಮಗಳ ಸಾರವನ್ನು ತಿಳಿದುಕೊಂಡು ಬನ್ನಂಜೆಯವರು ನೀಡುತ್ತಿದ್ದ ಪ್ರವಚನಗಳು ಜನಪ್ರಿಯವಾಗಿದ್ದವು. ಅವರ ಸಾವಿರಾರು ಗಂಟೆಗಳ ಉಪನ್ಯಾಸಗಳ ದಾಖಲೀಕರಣ ಆಗಿದೆ ಎನ್ನಲಾಗಿದೆ. ಇದೊಂದು ದಾಖಲೆಯೇ ಸರಿ. ಈ ಪ್ರವಚನಗಳ ಮೂಲಕ ಮುಖ್ಯವಾಗಿ ಅವರು ಹೊಂದಿದ್ದ ಭಗವದ್ಗೀತೆಯ ಕುರಿತ ಜ್ಞಾನ, ಮಾಧ್ವತತ್ವ ವಿಚಾರಗಳು ಮತ್ತು ಕೃಷ್ಣ ಭಕ್ತಿ ಪ್ರಖರವಾಗಿ ಹೊರಹೊಮ್ಮಿದೆ.

ಬನ್ನಂಜೆಯವರ ಮಾತು ಮತ್ತು ಬರಹಗಳಲ್ಲಿ ಭಿನ್ನ ವಿಚಾರಧಾರೆ ಇತ್ತು. ನಿದರ್ಶನಕ್ಕೆ ತಮ್ಮ ಹುಟ್ಟೂರು ಉಡುಪಿಯ ಕುರಿತು ಅವರು ಉದಯವಾಣಿ ಪತ್ರಿಕೆಯಲ್ಲಿ ಬರೆದಿದ್ದನ್ನು ನಾವು ಗಮನಿಸಬಹುದು. ಆ ಪತ್ರಿಕೆಯ ಸಾಪ್ತಾಹಿಕ ಪುರವಣಿಯ ಸಂಪಾದಕರಾಗಿಯೂ ಅವರು ಕಾರ್ಯ ನಿರ್ವಹಿಸಿದ್ದರು. ಉಡುಪಿಯ ಕುರಿತು ಬರೆಯುತ್ತಾ ಅವರು 'ಉಡುಪಿ' ಎಂದರೆ 'ಮರದ ತುಂಡಿನಲ್ಲಿ ತೇಲಿ ಬಂದ ಒಡೆಯನ ಊರು' ಎಂಬ ಅಭಿಪ್ರಾಯ ನೀಡಿದ್ದರು. 'ಪೊಡವಿಗೊಡೆಯ ಕೃಷ್ಣ' ಎಂಬುದು ಅವರ ನಂಬಿಕೆಯಾಗಿತ್ತು. ಈ ಮೂಲಕ ಉಡುಪಿ ಎಂದರೆ 'ಚಂದ್ರನ ಒಡೆಯ ಶಿವನ ಊರು' ಎಂಬ ಜನಜನಿತ ನಂಬಿಕೆಯನ್ನು ಪರಿಶೀಲಿಸುವಂತೆ ಮಾಡಿದ್ದರು. ನಿರರ್ಗಳ ಮಾತುಗಾರಿಕೆಯಿಂದ ತಮ್ಮ ವಿಚಾರಗಳನ್ನು ಒಪ್ಪುವಂತೆ ಮಾಡುವುದು ಅವರಿಗೆ ಸಾಧ್ಯವಿತ್ತು.



ಪದ್ಮಶ್ರೀ ಬನ್ನಂಜೆ ಗೋವಿಂದಾಚಾರ್ಯ

ಶ್ರೀಕೃಷ್ಣ ಬೋಧಿಸಿದ 'ಭಗವದ್ಗೀತೆ' ಭಾರತೀಯರಿಗೆ ಮಾತ್ರವಲ್ಲ ವಿದೇಶಿಯರಿಗೂ ಉನ್ನತ ಬದುಕಿಗೆ ದಾರಿದೀಪವಾಗಿ ಒದಗಿದೆ. ಮಹಾತ್ಮಗಾಂಧಿಯವರಿಂದ ತೊಡಗಿ ಅಬ್ದುಲ್ ಕಲಾಂರವರೆಗೆ ಅನೇಕ ಮಹನೀಯರಿಗೆ ಗೀತೆ ಪ್ರೇರಣೆ ಒದಗಿಸಿದೆ. ಗೀತೆಯ ಆಂತರ್ಯವನ್ನು ಬನ್ನಂಜೆಯವರಂತೆ ವಿಶ್ಲೇಷಿಸಿ ಪ್ರವಚನಗಳನ್ನು ನೀಡಿದ ವಿದ್ವಾಂಸರು ವಿರಳ. 'ಗೀತೆಯ ಬೆಳಕು' ಎಂಬುದು ಬನ್ನಂಜೆಯವರ ಒಂದು ಕೃತಿಯ ಶೀರ್ಷಿಕೆ. ಬನ್ನಂಜೆ ಎಂಬ ಗೀತಾಚಾರ್ಯರು ಈಗ ಮಾತು ನಿಲ್ಲಿಸಿದ್ದಾರೆ. ಆದರೆ ಅವರು ಹಚ್ಚಿದ ಗೀತೆಯ ಬೆಳಕು ಆರಿ ಹೋಗದು. ಅಗಲಿದ ಹಿರಿಯ ವಿದ್ವಾಂಸ ಬನ್ನಂಜೆ ಗೋವಿಂದಾಚಾರ್ಯರಿಗೆ ನಮ್ಮ ಅಂತಿಮ ನಮನಗಳು.

ಕರಾಳ ವರ್ಷ 2020ರಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ನಿರಂತರವಾಗಿ ನಡೆಯುತ್ತಿದ್ದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹಿನ್ನಡೆಯಾಗಿತ್ತು. ಎಲ್ಲ ಇತಿಮಿತಿಗಳ ನಡುವೆಯೂ ಸಂಘ ಕೆಲವು ಗುಣಮಟ್ಟದ ಕಾರ್ಯಕ್ರಮಗಳನ್ನು ಆಯೋಜಿಸಿ ಇಲ್ಲಿನ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಆಸಕ್ತಿಗಳು ಬತ್ತಿ ಹೋಗದಂತೆ ನೋಡಿಕೊಂಡಿದೆ. ಅಲ್ಲದೆ ಇದೀಗ ತಾನೇ ಸರ್ವಸದಸ್ಯರ ಮಹಾಸಭೆಯನ್ನೂ ಯಶಸ್ವಿಯಾಗಿ ಆನ್‌ಲೈನ್ ಮುಖಾಂತರ ಆಯೋಜಿಸಿದೆ. ಮಹಾಸಭೆಯಲ್ಲಿ ಹಲವಾರು ಸದಸ್ಯರು ನೀಡಿದ ಅಮೂಲ್ಯ ಸಲಹೆಗಳು ಸಂಘದ ಮುಂದಿನ ಬೆಳವಣಿಗೆಗೆ ಸಹಕಾರಿಯಾಗಲಿವೆ.

ಹಿಂದಿನ ವರ್ಷದ ಕಹಿ ನೆನಪು ನಮ್ಮನ್ನು ಕಾಡದಿರಲಿ. ವರ್ಷ 2021ರಲ್ಲಿ ನಿಮ್ಮೆಲ್ಲರ ಯೋಚನೆ, ಯೋಜನೆ ಮತ್ತು ಕನಸುಗಳು ಸಾಕಾರಗೊಳ್ಳಲಿ. ಜಗತ್ತಿನ ತುಂಬಾ ಕ್ಷೇಮ ಮತ್ತು ಸಮೃದ್ಧಿ ನೆಲೆಗೊಳ್ಳಲಿ. ಹೊಸ ಬೆಳಕು ಮೂಡಲಿ. ನಿಮಗೆಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

ಡಾ. ಅವನೀಂದ್ರನಾಥ್ ರಾವ್

## ನಮ್ಮನಮ್ಮೊಳಗೆ

# ಹೊಸ ವರುಷದ ಹೊಸ ಆಶಯಗಳೊಂದಿಗೆ

ಹೊಸ ವರ್ಷದಲ್ಲಿ ಕಾಲಿಟ್ಟಿದ್ದೇವೆ. ಕಳೆದ ವರ್ಷದ ಮೊದಲ ಭಾಗದಲ್ಲಿ ಗದಗುಟ್ಟಿಸುವಂತೆ ಬಂದ ಕೊರೊನಾದ ಹಾವಳಿಯಿಂದಾಗಿ ಇಂದಿನವರೆಗೂ ನಮ್ಮೆಲ್ಲರ ಬದುಕು ಹಲವಾರು ಬಗೆಗಳಲ್ಲಿ ಬದಲಾಗಿ ಹೋಗಿದೆ. ಹೊಸ ವರ್ಷವೆಂಬುದು ಹೊಸ ಆಶಯಗಳನ್ನು ತರಲೆಂಬುದು ಎಲ್ಲರ ಬಯಕೆ. ಆದರೆ, ಇದೆಲ್ಲವೂ ಒಂದು ಬಗೆಯ ಮರೀಚಿಕೆಯಂತೆ ತೋರುತ್ತಿದೆ.

ಇತ್ತೀಚೆಗೆ ಜಗತ್ತಿನ ಹಲವಾರು ದೇಶಗಳಲ್ಲಿ, ಭಾರತವೂ ಸೇರಿದಂತೆ, ಕೊರೊನಾ ಸೃಷ್ಟಿಸಿದ ಅವಾಂತರಗಳು ಇನ್ನೂ ಉಲ್ಬಣವಾಗುವ ಸಾಧ್ಯತೆಗಳು ಕಾಣುತ್ತಿವೆ. ರೂಪಾಂತರಗೊಂಡ ಕೊರೊನಾದ ಸೆಲೆಗಳು ಅತ್ಯಂತ ತ್ವರಿತಗತಿಯಲ್ಲಿ ಹಬ್ಬುವುದನ್ನು ವಿಜ್ಞಾನಿಗಳು ಈಗ ಖಚಿತಪಡಿಸಿದ್ದಾರೆ. ಇಂಗ್ಲೆಂಡ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಈ ರೂಪಾಂತರಿ ಕೊರೊನಾ ಈಗ ತನ್ನ ಬಾಹುಗಳನ್ನು ವಿಸ್ತಾರವಾಗಿ ಚಾಚುತ್ತಿರುವ ಕುರಿತಾದ ವರದಿಗಳು ಬರುತ್ತಿವೆ. ಹೀಗಾಗಿ ಅಮೆರಿಕಾ ಮತ್ತು ಯುರೋಪಿನ ಹಲವಾರು ರಾಷ್ಟ್ರಗಳು ಮತ್ತೆ ನಾಲ್ಕಾರು ವಾರಗಳ ಸಂಪೂರ್ಣ ಲಾಕ್‌ಡೌನ್ ಘೋಷಿಸಿವೆ. ನಮ್ಮ ದೇಶದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಕೊರೊನಾದ ಬಿರುಗಾಳಿಯನ್ನು ನಿಯಂತ್ರಣದಲ್ಲಿರಿಸಿಕೊಳ್ಳುವ ಎಲ್ಲ ಲಕ್ಷಣಗಳು ಕಾಣುತ್ತಿವೆ. ಆದರೆ, ಕಳೆದ ಕೆಲ ದಿನಗಳಿಂದ ಇಂಗ್ಲೆಂಡನಿಂದ ಬಂದ ಕೆಲವರಲ್ಲಿ ಕಂಡುಬಂದ ಈ ರೂಪಾಂತರಿ ಕೊರೊನಾದ ಹರಡುವಿಕೆಯನ್ನು ಹದ್ದುಬಸ್ತಿನಲ್ಲಿಡುವ ಕಾರ್ಯವನ್ನು ನಮ್ಮ ಆರೋಗ್ಯ ಕಾರ್ಯಕರ್ತರು ಮತ್ತು ಸರಕಾರಗಳು ಮಾಡುತ್ತಿವೆ. ಮುಂದಿನ ಕೆಲ ದಿನಗಳಲ್ಲಿ ಇದರ ನಿಯಂತ್ರಣದ ವಿವರಗಳು ನಮಗೆ ಲಭ್ಯವಾಗಬಹುದು.

ಈ ಸನ್ನಿವೇಶದಲ್ಲಿ ನಾವು ನಿಧಾನವಾಗಿ ನಮ್ಮ ಈ ಕೊರೊನಾ ಕಾಲದ ಬದುಕಿಗೆ ಹೊಂದಿಕೊಂಡು ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ನಿರತರಾಗಿದ್ದೇವೆ. ಶಾಲಾ ಕಾಲೇಜುಗಳನ್ನು ತೆರೆಯುವುದರ ಬಗ್ಗೆ ಚರ್ಚೆಗಳು, ಯೋಜನೆಗಳು ಏನೆಲ್ಲ ನಡೆಯುತ್ತಿವೆ. ಬೋರ್ಡ್ ಪರೀಕ್ಷೆಗಳನ್ನು ಮೇ ತಿಂಗಳಿಗೆ ಮುಂದೂಡಲಾಗಿದೆ. ವಿಶ್ವವಿದ್ಯಾಲಯಗಳು ನಿಧಾನವಾಗಿ ತಮ್ಮ ವ್ಯವಸ್ಥೆಗಳನ್ನು ತೆರೆದುಕೊಳ್ಳುವತ್ತ, ಅದರಲ್ಲೂ ಮುಖ್ಯವಾಗಿ ಕೊನೆಯ ಹಂತದಲ್ಲಿರುವ ಪಿ.ಎಚ್.ಡಿ. ವಿಧ್ಯಾರ್ಥಿಗಳನ್ನು ಎಲ್ಲ ಬಗೆಯ ಮುಂಜಾಗರೂಕತಾ ಕ್ರಮಗಳ ರೀತ್ಯಾ ಬರಮಾಡಿಕೊಳ್ಳುವತ್ತ ತಮ್ಮ ಪ್ರಯುತ್ನವನ್ನು ನಡೆಸಿವೆ. ಸಿನಿಮಾ ಹಾಲ್‌ಗಳು, ಅಂಗಡಿ ಮುಗ್ಗಟ್ಟುಗಳು, ಸರಕಾರಿ ಕಛೇರಿಗಳು...ಇವೆಲ್ಲವೂ ಇನ್ನೂ ಸಹಜ ಸ್ಥಿತಿಗೆ ಮರಳಲು ಸಹಕಾರಿಯಾಗಲು ಸರಕಾರ ನಿಭಂದನೆಗಳನ್ನು ಸಡಿಲಿಸುವತ್ತ ಕಾರ್ಯೋನ್ಮುಖವಾಗಿದೆ. ಒಮ್ಮೆ ಬಿಗಿ, ಇನ್ನೊಮ್ಮೆ ಸಡಿಲು, ಮುಖವಾಡ ಧರಿಸಿ, ಕೈತೊಳೆದು...ಏನೆಲ್ಲ ನಾವು ನಮ್ಮ ದಿನನಿತ್ಯದ ಜೀವನದಲ್ಲಿ ಮಾಡಬೇಕಾದ್ದು ಅನಿವಾರ್ಯವಾಗಿ ಹೋಗಿದೆ. ಇದು ನಮ್ಮನ್ನೆಲ್ಲ ಈಗ ಬಿಟ್ಟು ಹೋದ 2020 ರ ಬಳುವಳಿ.

ಈ ಹೊಸ ವರ್ಷ 2021 ಲಸಿಕೆಯ ಕನಸಿನೊಂದಿಗೆ ಪ್ರಾರಂಭವಾಗಿದೆ. ಇದರಿಂದ ಕೊರೊನಾದ ಓಟವನ್ನು ನಿಯಂತ್ರಿಸಬಹುದೆಂಬುದರ ಬಗ್ಗೆ ಈಗ ನಮಗಿರುವುದು ಆಶಯಗಳಷ್ಟೇ. ಯಾಕೆಂದರೆ ಇಲ್ಲಿಯ ತನಕ ನಮಗೆ ಈ ಕೊರೊನಾದ ವಿವಿಧ ರೂಪಗಳ ಸ್ವರೂಪ ಇನ್ನೂ ಪೂರ್ತಿಯಾಗಿ ಅರಿವಿಗೆ ಬಂದಿಲ್ಲದಿರುವುದೇ ದೊಡ್ಡ ಸಮಸ್ಯೆಯಾಗಿದೆ. ಮುಂದುವರಿದ ದೇಶಗಳು ಲಸಿಕೆಗಳ ಉಪಯೋಗವನ್ನು ಈಗಾಗಲೆ ಪಡೆಯಲು ಪ್ರಾರಂಭಿಸಿವೆ. ಭಾರತವೂ ಸಹ ಅಧಿಕೃತವಾಗಿ ಎರಡು ಲಸಿಕೆಗಳಿಗೆ ಪರವಾನಿಗೆ ನೀಡಿದೆ. ಜಗತ್ತಿನ ಬಡದೇಶಗಳಿಗೆ ಭಾರತದ ಲಸಿಕೆ ಅಗ್ಗದ ದರದಲ್ಲಿ ಸಿಕ್ಕು ಆಶಾಕಿರಣವಾಗಬೇಕು. ಮುಂದಿನ ಕೆಲ ದಿನಗಳಲ್ಲಿ ಲಸಿಕೆಗಳನ್ನು ಹಾಕುವ ಕಾರ್ಯಕ್ರಮ ಪ್ರಾರಂಭವಾಗುವುದರ ಬಗ್ಗೆ ಈಗಾಗಲೇ ಸರಕಾರಗಳು ವಿವರಗಳನ್ನು ನೀಡುವುದರ ಜೊತೆಗೆ ಲಸಿಕೆ ಹಾಕುವ ತಾಲೀಮುಗಳನ್ನು ನಡೆಸುತ್ತಿವೆ. ಈ 2021 ನಮಗೆಲ್ಲ ಭರವಸೆಯ ವರುಷವಾಗಲೆಂದು ನಾವೆಲ್ಲ ಹಾರೈಸೋಣ.

ನಮ್ಮ ದೇಶದ ಅರ್ಥಿಕ ವ್ಯವಸ್ಥೆ ಇನ್ನೂ ನಿಧಾನವಾಗಿ ಚೇತರಿಸಿಕೊಳ್ಳುತ್ತಿದೆ. ಮುಖ್ಯವಾಗಿ ಬಡ ಕೂಲಿಕಾರರು, ವಲಸೆ ಕಾರ್ಮಿಕರು ಮತ್ತು ಉದ್ಯಮಗಳಲ್ಲಿ ಕೆಲಸ ಮಾಡುತ್ತಿರುವವರೆಲ್ಲಇನ್ನೂ ತಮ್ಮ ಕೆಲಸದಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳಲು ಸಾಧ್ಯವಾಗಿಲ್ಲ. ಸರಕಾರ ಹಲವಾರು ಬಗೆಯ ಬೆಂಬಲಗಳನ್ನು ಘೋಷಿಸಿದ್ದರೂ ಅವುಗಳಿಂದ ಆಗಬೇಕಾದ ಪರಿಣಾಮ ಇನ್ನೂ ಅರ್ಥಿಕ ವ್ಯವಸ್ಥೆಯ ಮೇಲೆ ಕಾಣುತ್ತಿಲ್ಲವೆಂಬುದು ಹಲವು ತಜ್ಞರ ಅಭಿಮತವಾಗಿದೆ. ಇನ್ನೂ ಕೆಲವು ಕಾಲ ಅದರ ಪರಿಣಾಮಗಳಿಗಾಗಿ ನಾವು ಕಾದು ನೋಡಬೇಕಿದೆ. ಸರಕಾರದ ಪ್ರಯತ್ನ ಈ ಕುರಿತಾಗಿ ನಿರಂತರವಾಗಿ ಸಾಗಿದೆ. ದೇಶದ ಅರ್ಥಿಕ ವ್ಯವಸ್ಥೆ ಬರುವ ಫೆಬ್ರುವರಿ 1 ರಂದು ಮಂಡಿತವಾಗಲಿರುವ ಮುಂಗಡ ಪತ್ರದ ಎದುರು ನೋಡುತ್ತಿದೆ.

ಈ ಎಲ್ಲ ದೇಶಿಯ ಮತ್ತು ಜಾಗತಿಕ ಜಟಿಲ ಸಮಸ್ಯೆಗಳ ನಡುವೆ ದೆಹಲಿ ಕರ್ನಾಟಕ ಸಂಘ ತನ್ನ ಕಾರ್ಯಚಟುವಟಿಕೆಗಳನ್ನು ಸರಕಾರದ ನಿಯಮಾವಳಿಗಳ ಹಂದರೊದಳಕ್ಕೆ ಹಮ್ಮಿಕೊಳ್ಳುತ್ತ ಬಂದಿದೆ. ಈಗಾಗಲೆ ಅಭಿಮತ ಪತ್ರಿಕೆಯಲ್ಲಿ ವರದಿ ಮಾಡಿದಂತೆ ಸಂಘದ ಹಲವಾರು ಕಾರ್ಯಕ್ರಮಗಳನ್ನು ಜಾಲತಾಣದ ಮೂಲಕ ಹಮ್ಮಿಕೊಂಡು ಸಾವಿರಾರು ಸಹೃದಯರಿಗೆ ತಲುಪಿಸುವ ಕೆಲಸವನ್ನು ಯಶಸ್ವಿಯಾಗಿ ಮಾಡಲಾಗುತ್ತಿದೆ. ಈ ಎಲ್ಲ ಕೊರೊನಾದ ಸಂಕಷ್ಟದ ವೇಳೆಯಲ್ಲೂ ಸಂಘದ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಹೋಗುವಲ್ಲಿ ನೀವೆಲ್ಲ ಆರಿಸಿದ ಕಾರ್ಯಕಾರಿ ಸಮಿತಿ ಕಾಲಕಾಲಕ್ಕೂ ಸಭೆ ಸೇರಿ ಕಾರ್ಯ ನಡೆಸುತ್ತಿದೆ. ಜೊತೆಗೆ ಸಂಘದ ಸಿಬ್ಬಂದಿಯವರ ಕಾರ್ಯಕ್ಷಮತೆ ಮತ್ತು ಕಾರ್ಯತತ್ಪರತೆಯನ್ನೂ ನಾವು ಶ್ಲಾಘಿಸಬೇಕು.

ಸಂಘದ ಸರ್ವಸದಸ್ಯರ ಸಭೆಯನ್ನು ಮೊಟ್ಟ ಮೊದಲ ಬಾರಿಗೆ ಜಾಲತಾಣದ ಮೂಲಕ ಮತ್ತು ಎಲ್ಲ ನಿಯಮಾವಳಿಗಳ ಅನ್ವಯ ಆಯೋಜಿಸುವತ್ತ ನಾವು ಹೆಜ್ಜೆಯಿಟ್ಟಿದ್ದೇವೆ. ಇದೊಂದು ಸಂಘದ ಚರಿತ್ರೆಯಲ್ಲಿ ಮೈಲಿಗಲ್ಲು. ಇನ್ನೂ ಮುಖ್ಯವಾಗಿ ಈ ಎಲ್ಲ ಸಂಕಷ್ಟಗಳ ಸಮಯದಲ್ಲಿ 'ಅಭಿಮತ'ದ ಸಂಚಿಕೆಗಳನ್ನು ನಿರಂತರವಾಗಿ ಹೊರತರುತ್ತಿರುವ ಸಂಪಾದಕರಿಗೆ, ಸಂಪಾದಕ ಮಂಡಳಿಗೆ ಮತ್ತು ನೆರವಾದ ಎಲ್ಲ ಸಿಬ್ಬಂದಿಗಳಿಗೆ ಹಾರ್ದಿಕ ಅಭಿನಂದನೆಗಳು.

ಇನ್ನೂ ಹಲವಾರು ಕಾಲ ನಾವು ಈ ಹೋರಾಟದಲ್ಲಿ ತೊಡಗಿಕೊಳ್ಳಬೇಕಾಗಿದೆ. ಕೊರೊನಾ ಕುರಿತಾದ ವಿಚಾರಗಳಲ್ಲಿ ನಮ್ಮ ದೇಶದ ಜನಸಮುದಾಯದಲ್ಲಿ ಒಂದು ಬಗೆಯ ಸ್ಪಷ್ಟತೆ ಮತ್ತು ಜೊತೆಗೆ ಬದುಕನ್ನು ಕಟ್ಟಿಕೊಳ್ಳುವತ್ತಣದ ಅನಿವಾರ್ಯತೆ ಮೂಡುತ್ತಿದೆ. ಇದೊಂದು ಸಾವು ಬದುಕಿನ ಮಧ್ಯದ ಉಯ್ಯಾಲೆಯೆಂಬುದರಲ್ಲಿ ಯಾವ ಸಂಶಯೂ ಇಲ್ಲ. ನಮ್ಮ ದೆಹಲಿಯ ಮತ್ತು ಸುತ್ತಮುತ್ತಲಿನ ಭಾಗದ ಕನ್ನಡಿಗರನ್ನು ಈ ಕೊರೊನಾದ ಹಸ್ತ ಸವರಿಕೊಂಡು ಹೋಗಿದೆ. ಅದರಲ್ಲಿ ಹೆಚ್ಚಿನವರು ಈ ಸ್ಪರ್ಶವನ್ನು ಅರಗಿಸಿಕೊಂಡಿದ್ದರೆ, ಇನ್ನೂ ಹಲವರು ಅದಕ್ಕೆ ಪಕ್ಕಾಗಿದ್ದಾರೆ. ಇವೆಲ್ಲ ವೇದನೆಗಳು ಈ ವರುಷದಲ್ಲಿ ಮಾಯವಾಗಿ ನಮ್ಮೆಲ್ಲರ ಜಗತ್ತು ಇನ್ನಾದರೂ ಸಹಜ ಸ್ಥಿತಿಗೆ ಮರಳಲಿ ಎಂಬ ಹಾರೈಕೆಗೊಳೊಂದಿಗೆ ನಿಮ್ಮೆಲ್ಲರನ್ನು ಈ ಹೊಸ ವರ್ಷಕ್ಕೆ ಸ್ವಾಗತಿಸುತ್ತಿದ್ದೇನೆ.

***ಡಾ. ವೆಂಕಟಾಚಲ ಹೆಗಡೆ***
**ಅಧ್ಯಕ್ಷರು**

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ, ತಮಗೆ ಹಾಗೂ ತಮ್ಮ ಕುಟುಂಬಕ್ಕೆ ಹೊಸ ವರ್ಷ ಮತ್ತು ಮಕರ ಸಂಕ್ರಾಂತಿಯ ಶುಭಾಶಯಗಳು.

ಪ್ರಸ್ತುತ ಕಾರ್ಯಕಾರಿ ಸಮಿತಿ ಬಂದು ಎರಡು ವರ್ಷ ಆಗಿದೆ. ಮೊದಲ ವರ್ಷದಲ್ಲಿ ಪೂರ್ತಿ ಕಾರ್ಯಕ್ರಮಗಳಾದರೆ ಎರಡನೇಯ ವರ್ಷ ಮಾರಕ ರೋಗ ಕೊರೊನಾದಿಂದಾಗಿ ಕಾರ್ಯಕ್ರಮಗಳಿಲ್ಲದೆ ನಿಶಬ್ಧವಾಗಿತ್ತು. ಆದರೂ ಸಹ ಫೇಸ್‌ಬುಕ್ ಲೈವ್ ಮುಖಾಂತರ ದೆಹಲಿ ಕರ್ನಾಟಕ ಸಂಘ ಸಾವಿರಾರು ಜನಕ್ಕೆ ಸಂಗೀತ, ನೃತ್ಯ, ಸಾಹಿತ್ಯ ಕಾರ್ಯಕ್ರಮಗಳನ್ನು ನೀಡುತ್ತಾ ಸಾಂಸ್ಕೃತಿಕವಾಗಿ ಸಕ್ರಿಯವಾಗಿದೆ. ಆದರೆ ಸಂಘದ ವಾರ್ಷಿಕ ಆಟೋಟ ಸ್ಪರ್ಧೆಗಳು, ಕ್ರಿಕೆಟ್ ಪಂದ್ಯಾವಳಿ, ಪಿಕ್‌ನಿಕ್ ಮತ್ತು ಆಹಾರ ಮೇಳ ಕಾರ್ಯಕ್ರಮಗಳನ್ನು ಕೊರೊನಾದಿಂದಾಗಿ ಆಯೋಜಿಸಲು ಸಾಧ್ಯವಾಗಿಲ್ಲ.

ಸಂಘದ ಸದಸ್ಯರು ಕಾರ್ಯಕ್ರಮಗಳನ್ನು ವೀಕ್ಷಿಸಲು ಕಾತರದಿಂದ ಕಾಯುತ್ತಿದ್ದಾರೆ. ಸರ್ಕಾರಗಳ ನಿಬಂಧನೆಗಳ ಕಾರಣ ಯಾವುದೇ ಒಟ್ಟಾಗಿ ಸೇರುವ ಮತ್ತು ಸೇರಿಸುವ ಕಾರ್ಯಕ್ರಮಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಈ ಮಾರಕ ರೋಗಕ್ಕೆ ವ್ಯಾಕ್ಸಿನ್ ಈಗಾಗಲೇ ಬಂದಿದೆ. ಹಾಗಾಗಿ ಮುಂದಿನ ದಿನಗಳಲ್ಲಿ ಸಂಘದ ಕಾರ್ಯಕ್ರಮಗಳನ್ನು ಸರ್ಕಾರದ ನಿಯಮಾನುಸಾರ ಹಮ್ಮಿಕೊಳ್ಳಲು ಸಾಧ್ಯವಾಗಬಹುದು ಎಂಬ ಆಶಯವನ್ನು ಹೊಂದಿದ್ದೇವೆ.

ಈ ಪರಿಸ್ಥಿತಿಯಲ್ಲೂ ದಿನಾಂಕ 03.01.2021 ರ ಭಾನುವಾರ ಝೂಮ್ ಆ್ಯಪ್ ಮೂಲಕ ಆಯೋಜಿಸಿದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಯಶಸ್ವಿಯಾಗಿ ನಡೆಯಿತು. ಇದರಲ್ಲಿ ನೂರಾರು ಸಂಘದ ಸದಸ್ಯರು ಪಾಲ್ಗೊಂಡಿದ್ದಾರೆ. ಮಹಾಸಭೆಯನ್ನು ಯಶಸ್ವಿಯಾಗಿ ಮಾಡಿದ ತಮಗೆಲ್ಲರಿಗೂ ನಾನು ಅನಂತಾನಂತ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ.

27.12.2020ರಂದು ಫೇಸ್‌ಬುಕ್ ಲೈವ್‌ನಲ್ಲಿ ಸಾಹಿತಿ ಪದ್ಮಶ್ರೀ ಡಾ. ದೊಡ್ಡರಂಗೇಗೌಡರ ಸಾಹಿತ್ಯಕ್ಕೆ ಸಂಗೀತ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು. ಇದು ತುಂಬಾ ಉತ್ತಮವಾಗಿ ಮೂಡಿ ಬಂದಿದೆ. ಈ ಕಾರ್ಯಕ್ರಮದಲ್ಲಿ ಹಾಡುಗಳನ್ನು ಹಾಡಿದ ನಮ್ಮ ಕಲಾವಿದರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

ಈ ವರ್ಷದ ಪ್ರಾರಂಭದಲ್ಲಿ ಸಂಘದಲ್ಲಿ ಸಕ್ರಿಯರಾಗಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದ ಆಜೀವ ಸದಸ್ಯರಾದ ಶ್ರೀ ಕೆ. ರೋಶನ್ ಮತ್ತು ಶ್ರೀ ಎಸ್. ಎನ್.ಹನುಮಂತಪ್ಪ ಇವರು ನಿಧನರಾಗಿದ್ದಾರೆ. ಇವರ ಆತ್ಮಕ್ಕೆ ಮೋಕ್ಷ ಸಿಗಲಿ ಮತ್ತು ಇವರ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

**ಮತ್ತೊಮ್ಮೆ ತಮಗೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು.**

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ಅಭಿನಂದನೆ

# ಮೇದಾಂತ ಆಯುರ್ವೇದ ಕೇಂದ್ರದ ನಿರ್ದೇಶಕರಾಗಿ ಡಾ. ಭೀಮ ಭಟ್





ಭಾರತದ ಪ್ರಥಮ ಎನ್‌ಎಬಿಎಚ್ ಮಾನ್ಯತೆ ಪಡೆದ ಮೇದಾಂತ ಆಯುರ್ವೇದ ಕೇಂದ್ರದ ವೈದ್ಯಕೀಯ ನಿರ್ದೇಶಕರಾಗಿ ಡಾ. ಭೀಮ ಭಟ್ ನೇಮಕಗೊಂಡಿದ್ದಾರೆ. ಈ ಮೊದಲು ಡಾ. ಭಟ್ ದೆಹಲಿಯ ಹೋಲಿ ಫ್ಯಾಮಿಲಿ ಆಸ್ಪತ್ರೆಯಲ್ಲಿ ಆಯುರ್ವೇದ ವಿಭಾಗವನ್ನು ಆರಂಭಿಸಿ ಅದರ ಮುಖ್ಯಸ್ಥರಾಗಿ ಕಳೆದ 32 ವರ್ಷದಿಂದ ಸೇವೆ ಸಲ್ಲಿಸುತ್ತಿದ್ದರು.

ಅವರು ಗುಜರಾತ್ ಆಯುರ್ವೇದ ವಿಶ್ವವಿದ್ಯಾಲಯದಿಂದ ಆಯುರ್ವೇದದಲ್ಲಿ ಚಿನ್ನದ ಪದಕದೊಂದಿಗೆ ಎಂ.ಡಿ. ಪದವಿ ಗಳಿಸಿದ್ದರು. ಕಾಯಚಿಕಿತ್ಸೆ ಮತ್ತು ಪಂಚಕರ್ಮ ಚಿಕಿತ್ಸೆಯ ಮೂಲಕ ದೇಶ ವಿದೇಶಗಳಲ್ಲಿ ಹಲವಾರು ರೋಗಿಗಳ ಖಾಯಿಲೆಗಳನ್ನು ಗುಣಪಡಿಸಿದ್ದರು.

ಡಾ. ಭೀಮಭಟ್ ಅವರ ಸಾಧನೆಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.

# ದೆಹಲಿ ಕರ್ನಾಟಕ ಸಂಘ ನಲ್ಮೆಯ ತವರು ಮನೆಯಂತೆ

## -ಸಂಗೀತ ಸಂಭ್ರಮದಲ್ಲಿ ಕವಿ ಡಾ. ದೊಡ್ಡರಂಗೇಗೌಡ

ದೆಹಲಿ ಕರ್ನಾಟಕ ಸಂಘ ನನ್ನ ನಲ್ಮೆಯ ತವರುಮನೆಯಂತಿದೆ. ನಾನು ಪ್ರತೀ ಸಾರಿ ದೆಹಲಿಗೆ ಬಂದಾಗ ಸಂಘ ನನಗೆ ಮುಖ್ಯತಾಣ ಆಗಿರುತ್ತದೆ ಎಂದು ಹಿರಿಯ ಕವಿ ಪದ್ಮಶ್ರೀ ಡಾ. ದೊಡ್ಡರಂಗೇಗೌಡ ಸ್ಮರಿಸಿಕೊಂಡಿದ್ದಾರೆ.

ಅವರು ದಿನಾಂಕ 27.12.2020ರಂದು ದೆಹಲಿ ಕರ್ನಾಟಕ ಸಂಘ ಅಂತರ್ಜಾಲದ ಮೂಲಕ ಆಯೋಜಿಸಿದ 'ಡಾ. ದೊಡ್ಡರಂಗೇಗೌಡರ ಸಾಹಿತ್ಯದ ಸಂಗೀತ ಸಂಭ್ರಮ' ಕಾರ್ಯಕ್ರಮಕ್ಕೆ ವಿಡೀಯೋ ಸಂದೇಶದ ಮೂಲಕ ಶುಭಕೋರಿ ಮಾತನಾಡುತ್ತಿದ್ದರು. ಕನ್ನಡದ ಚೇತನವನ್ನು ಜಗತ್ತಿಗೆ ತೋರಿಸುತ್ತಿರುವ ಏಕೈಕ ಕನ್ನಡ ಸಂಘ ದೆಹಲಿ ಕರ್ನಾಟಕ ಸಂಘವಾಗಿದೆ. ಸಂಘ ಪ್ರಕಟಿಸುತ್ತಿರುವ 'ಅಭಿಮತ' ಪತ್ರಿಕೆಯ ಮೊದಲ ಪುಟದಿಂದ ಕೊನೆಯ ಪುಟದವರೆಗೆ ನಾನು ಆಸಕ್ತಿಯಿಂದ ಓದುತ್ತೇನೆ. ಇಲ್ಲಿ ಬರುವ ವೈವಿಧ್ಯಮಯ ಬರಹಗಳು, ಚಟುವಟಿಕೆಗಳು ಗುಣಮಟ್ಟದ್ದಾಗಿದ್ದು ಸಂಘದೊಂದಿಗಿನ ನನ್ನ ಹೃತ್ಪೂರ್ವಕ ನಂಟಿಗೆ ಕಾರಣವಾಗಿದೆ. ಬೆಳಕಿಂಡಿಯಂತಿರುವ ಈ ಪತ್ರಿಕೆ ನನ್ನ ಸಂಬಂಧ ವೃದ್ಧಿಗೆ ಸಹಕರಿಸಿದೆ ಎಂದು ಶ್ಲಾಘಿಸಿದರು. ಸಂಘದ ಸದಸ್ಯರುಗಳ ಕ್ರಿಯಾಶೀಲ ನಡವಳಿಕೆಯನ್ನು ಅವರು ಕೊಂಡಾಡಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಮಾತನಾಡಿ ಕನ್ನಡದಲ್ಲಿ ವೈವಿಧ್ಯಮಯ ಸಾಹಿತ್ಯವನ್ನು ನೀಡಿರುವ ಡಾ. ದೊಡ್ಡರಂಗೇಗೌಡ ಅವರ ಹಾಡುಗಳ ಸಂಗೀತ ಸಂಭ್ರಮವನ್ನು ನಾವು ಆಯೋಜಿಸಿದ್ದೇವೆ. ಮುಂದಿನ ತಿಂಗಳು ಫೆಬ್ರವರಿಗೆ ಎಪ್ಪತ್ತೈದು ವರ್ಷ ತುಂಬಲಿರುವ ಹಿರಿಯ ಕವಿಯ ಸಾಹಿತ್ಯದ ಈ ಕಾರ್ಯಕ್ರಮ ತುಂಬಾ ಪ್ರಸ್ತುತವಾಗಿದೆ ಎಂದು ಡಾ. ಹೆಗಡೆ ಹೇಳಿದರು.

ನಂತರ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಬೆಂಗಳೂರಿನ ಹೆಸರಾಂತ ಗಾಯಕಿ ಶ್ರೀಮತಿ ಕುಶಾಲ ಮತ್ತು ದೆಹಲಿಯ ಕಲಾವಿದರಾದ ಅಶೋಕ ಕುಂಬಾರ್, ಚಿದಂಬರ ಕೋಟಿ, ಶ್ರೀಮತಿ ಶುಭಾದೇವಿಪ್ರಸಾದ್, ಕು. ಪೂರ್ಣಿಮಾ ಅಡಿಗ, ಕು. ಪ್ರೇರಣಾ ರಾವ್, ಕು. ಮೇಘಾ ಕಿಣಿ, ಹಿಮಾಂಶು ದೇವಿಪ್ರಸಾದ್ ಮೊದಲಾದವರು ಡಾ. ದೊಡ್ಡರಂಗೇಗೌಡರ ರಚನೆಯ ಸಿನಿಮಾ ಹಾಡುಗಳನ್ನು ಹಾಡಿ ರಂಜಿಸಿದರು. ಈ ಕಾರ್ಯಕ್ರಮವನ್ನು ನಾಡು ಹೊರನಾಡುಗಳಿಂದ ಹಲವಾರು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ, ಗಾಯಕ ಚಿದಂಬರ ಕೋಟಿಯವರು ಹಿರಿಯ ಕವಿ ಡಾ. ದೊಡ್ಡರಂಗೇಗೌಡ ಅವರನ್ನು ಬೆಂಗಳೂರಿನ ನಿವಾಸದಲ್ಲಿ ಸಂದರ್ಶಿಸಿ ಅವರ ವಿಡೀಯೋ ಸಂದೇಶವನ್ನು ಸಂಘಕ್ಕೆ ಒದಗಿಸಿ ಸಹಕರಿಸಿದರು.

ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಸ್ವಾಗತಿಸಿ ವಂದಿಸಿದರು.

***ಡಾ. ಅವನೀಂದ್ರನಾಥ್ ರಾವ್***



**ಪದ್ಮಶ್ರೀ ಡಾ. ದೊಡ್ಡರಂಗೇಗೌಡ**



**ಹೆಸರಾಂತ ಗಾಯಕಿ ಶ್ರೀಮತಿ ಕುಶಾಲ**




**ಹಿರಿಯ ಕವಿ ಪದ್ಮಶ್ರೀ ಡಾ. ದೊಡ್ಡರಂಗೇಗೌಡ ಅವರ ಸಾಹಿತ್ಯದ ಸಂಗೀತ ಸಂಭ್ರಮ ಕಾರ್ಯಕ್ರಮದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರೊಂದಿಗೆ ದೆಹಲಿಯ ಕಲಾವಿದರು.**

# ಹಿಂದೂಸ್ತಾನ್ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಡಾ. ಶ್ರೀಧರ್ ಎಸ್.ಎನ್.



ಗುರುಗ್ರಾಮದ ಅಮಿಟಿ ವಿಶ್ವವಿದ್ಯಾಲಯದಲ್ಲಿ ನಿರ್ದೇಶಕರಾಗಿದ್ದ ಡಾ. ಶ್ರೀಧರ್ ಎಸ್. ಎನ್. ಅವರು ಚೆನ್ನೈನ ಹಿಂದೂಸ್ತಾನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಸೈನ್ಸ್ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ನೇಮಕಗೊಂಡಿದ್ದಾರೆ.

ಮೆಕ್ಯಾನಿಕಲ್‌ನಲ್ಲಿ ಬಿ.ಇ. ಪದವಿಯನ್ನು ಪಡೆದಿರುವ ಅವರು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನಿಂದ ಏರೋಸ್ಪೇಸ್‌ನಲ್ಲಿ ಪಿ.ಎಚ್.ಡಿ. ಪಡೆದರು. ಬೆಂಗಳೂರಿನ ಬಿ.ಎಮ್.ಎಸ್. ಕಾಲೇಜ್, ಎಮ್.ಎಸ್. ರಾಮಯ್ಯ ಸ್ಕೂಲ್ ಆಫ್ ಅಡ್ವಾನ್ಸ್ ಸ್ಟಡೀಸ್, ಕೆ.ಎಸ್. ಸ್ಕೂಲ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಮೊದಲಾದ ಸಂಸ್ಥೆಗಳಲ್ಲಿ ಭೋದಕರಾಗಿ ಮತ್ತು ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರು. 2019 ರಲ್ಲಿ ಗುರುಗ್ರಾಮದ ಅಮಿಟಿ ಯೂನಿವರ್ಸಿಟಿಯಲ್ಲಿ ನಿರ್ದೇಶಕರಾಗಿ ನೇಮಕವಾಗಿದ್ದರು. ಅವರಿಗೆ 32 ವರ್ಷಗಳ ಭೋದನೆಯ ಅನುಭವ ಇದೆ.

ಭಿವಾಡಿ ಕನ್ನಡ ಸಂಘದ ಸಕ್ರಿಯ ಸದಸ್ಯರಾಗಿದ್ದ ಅವರು ಅವರ ಪತ್ನಿ ಶ್ರೀಮತಿ ಕೆ.ಸಿ. ರತ್ನಶ್ರೀ ಶ್ರೀಧರ್ ಅವರೊಂದಿಗೆ ಕನ್ನಡಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಡಾ. ಶ್ರೀಧರ್ ಎಸ್.ಎನ್. ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.

# ಜಕಾರ್ತ ನಾಟಕೋತ್ಸವದಲ್ಲಿ ಸವಿತಾ ಇನಾಮದಾರ್ ಅವರ ನಾಟಕ ಪ್ರದರ್ಶನ




ಜಕಾರ್ತದಲ್ಲಿ ಅಕ್ಟೋಬರ್ 11 ರಿಂದ ಮೂರು ದಿನಗಳ ಕಾಲ ನಡೆದ ಭಾರತೀಯ ನಾಟಕೋತ್ಸವ ರಂಗಮಂಚದಲ್ಲಿ ದೆಹಲಿಯ ಶ್ರೀಮತಿ ಸವಿತಾ ಇನಾಮದಾರ್ ಅವರು ರಚಿಸಿ, ನಿರ್ದೇಶಿಸಿ ನಟಿಸಿದ ಹಾಸ್ಯ ನಾಟಕ 'ಹಿತ್ತಲ ಗಿಡ ಮದ್ದಲ್ಲ' ಪ್ರದರ್ಶನಗೊಂಡಿದೆ.

ಜಕಾರ್ತದ ಕಿಶೋರ್ ಫ್ಯಾನ್ ಕ್ಲಬ್, ಅಂಬೇಸಿ ಆಫ್ ಇಂಡಿಯಾ ಮತ್ತು ಜಕಾರ್ತ ಮತ್ತು ಇಂಡಿಯಾ ಕ್ಲಬ್ ಆಶ್ರಯದಲ್ಲಿ ವರ್ಚುಯಲ್ ನಾಟಕೋತ್ಸವವನ್ನು ಆಯೋಜಿಸಲಾಗಿತ್ತು.

ಶ್ರೀಮತಿ ಸವಿತಾ ಇನಾಮದಾರ್ ಅವರ ಸಾಧನೆಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.



# ಓದುಗರ ಸ್ಪಂದನ





ನಮ್ಮ ದೆಹಲಿ ಕರ್ನಾಟಕ ಸಂಘದ ಹೆಮ್ಮೆಯ ಪ್ರಕಟಣೆಯಾಗಿರುವ ಮುಖಪತ್ರಿಕೆ 'ಅಭಿಮತ' ದಿನಕಳೆದಂತೆ ಬಹಳ ಪ್ರಬುದ್ಧ ಪ್ರಕಟಣೆಯ ರೂಪದಲ್ಲಿ ಮೂಡಿ ಬರುತ್ತಿದೆ. ತಿಂಗಳಿಂದ ತಿಂಗಳಿಗೆ ವಿಶೇಷ ಮತ್ತು ಗಂಭೀರವಾದ ವೈವಿಧ್ಯಮಯ ವಸ್ತುಗಳನ್ನೊಳಗೊಂಡು ಅತ್ಯಂತ ಸುಂದರ, ಸರಳ ಆಡು ಭಾಷೆಯ ಕನ್ನಡದಲ್ಲಿ ದೆಹಲಿ ಹಾಗೂ ಕರ್ನಾಟಕದ ಸಹಸ್ರಾರು ಮಂದಿ ಕನ್ನಡಿಗರನ್ನು ತಪ್ಪದೇ ಸಕಾಲಕ್ಕೆ ತಲುಪುತ್ತಿರುವುದು ಒಂದು ಶ್ಲಾಘನೀಯ ಕಾಯಕ. ಇದರ ಯಶಸ್ವಿಗೆ ಕಾರಣೀಭೂತರಾದ ಸರ್ವರಿಗೂ ನಮ್ಮ ಹೃದಯಪೂರ್ವಕ ಕೃತಜ್ಞತೆಗಳು ಮತ್ತು ಅಭಿನಂದನೆಗಳು. ಇನ್ನು ಮುಂದೆಯೂ ಈ ಕಾರ್ಯ ನಿರಂತರವಾಗಿ ಹೀಗೇ ನಡೆಯುತ್ತಿರಲಿ ಎಂದು ಹಾರೈಸುತ್ತೇವೆ.

***ಸಖಾರಾಮ ಉಪ್ಪೂರು***
ಶ್ರೀಕ್ಷೇತ್ರ ಹೊಸಕಟ್ಟೆ

## ಮಧ್ವ ತತ್ವದ ಮೇರು ಪರ್ವತ, ಶಿರೋಮಣಿ

# ಪದ್ಮಶ್ರೀ ಬನ್ನಂಜೆ ಗೋವಿಂದಾಚಾರ್ಯ



ಪೂಜ್ಯ ಪದ್ಮಶ್ರೀ ಬನ್ನಂಜೆ ಗೋವಿಂದ ಆಚಾರ್ಯರು ನಿಧನರಾದ ಸುದ್ದಿ ಅತ್ಯಂತ ದುಃಖದಾಯಕವಾಗಿದೆ.

ವಿದ್ಯಾವಾಚಸ್ಪತಿ ಬನ್ನಂಜೆ ಶ್ರೀಗೋವಿಂದಾಚಾರ್ಯರು, ಅಖಂಡ ವಿದ್ವತ್ತು ಮತ್ತು ಪ್ರವಚನಗಳಿಗೆ ಲೋಕಮಾನ್ಯರಾಗಿದ್ದಾರೆ. ವೇದ, ಉಪನಿಷತ್ತು, ಪುರಾಣ ಇತಿಹಾಸಗಳಲ್ಲಿ ಅವರದ್ದು ಅಸಾಮಾನ್ಯ ಪಾಂಡಿತ್ಯ. ಅವರು, ಸಾಮಾನ್ಯರನ್ನೂ ತಮ್ಮ ಆಕರ್ಷಣೀಯ ಕಥಾನಕ ಹೃದಯವಂತಿಕೆ ಮತ್ತು ಸಜ್ಜನಿಕೆಗಳ ಮುಖೇನ ಭಾರತೀಯ ಸಂಸ್ಕೃತಿಗಳತ್ತ ಕರೆದೊಯ್ಯುತ್ತಿದ್ದ ರೀತಿ ಅಸಾಮಾನ್ಯ.

'ಮಾಧ್ವ ತತ್ವ'ಗಳಲ್ಲಿ ಅವರ ಅಧ್ಯಯನದ ಆಳ ಅಪಾರವಾದದ್ದು. ಆದರೆ ದ್ವೈತ ವಿಚಾರಗಳಷ್ಟಕ್ಕೇ ಅವರ ಪಾಂಡಿತ್ಯ ಸೀಮಿತಗೊಂಡಿರದೆ, 'ಅದ್ವೈತ, ವಿಶಿಷ್ಟಾದ್ವೈತ' ಇನ್ನಿತರ ಭಾರತೀಯ ಹಾಗೂ 'ವಿಶ್ವ ಚಿಂತನೆಗಳು, ಜಾನಪದ' ಇತ್ಯಾದಿಗಳ ವಿಚಾರದಲ್ಲ ಅವರಿಗಿರುವ ಅಸಾಮಾನ್ಯ ಪರಿಣತಿ' ಅಗಾಧ. ಕನ್ನಡ ಹಾಗೂ ಸಂಸ್ಕೃತ ಸಾರಸ್ವತ ಲೋಕಕ್ಕೆ ಅವರು ಅನೇಕ ಕೊಡುಗೆಗಳನ್ನಿತ್ತಿದ್ದಾರೆ. ದೇಶ, ವಿದೇಶಗಳಲ್ಲಿ ಸಂಚರಿಸಿ ಭಾರತೀಯ ಸಾಂಸ್ಕೃತಿಕ ರಾಯಭಾರಿಯಾಗಿ ನಮ್ಮ ದೇಶೀಯ ಪರಂಪರೆಗಳ ಶ್ರೇಷ್ಠತೆಯನ್ನು ಪಸರಿಸುವಲ್ಲಿ ಆಚಾರ್ಯರು ಕೆಲಸ ಮಾಡಿದ್ದಾರೆ. ಉಡುಪಿಯ ಅಷ್ಟಮಠಗಳ ಆಚಾರ್ಯರಿಗೂ, ಇವರಲ್ಲಿ ಅಪಾರ ಗೌರವವಿತ್ತು.

ಬನ್ನಂಜೆಯಲ್ಲಿ 03.08.1936ರಲ್ಲಿ, ವಿದ್ವಾಂಸ ತರ್ಕಕೇಸರಿ ನಾರಾಯಣಾಚಾರ್ಯರ ಸುಪುತ್ರರಾಗಿ ಜನಿಸಿದ ಆಚಾರ್ಯರು, ಬಾಲ್ಯದಲ್ಲಿ ವೈದಿಕ ಶಿಕ್ಷಣವನ್ನು ತೀರ್ಥರೂಪರಿಂದಲೇ ಪಡೆದರು. ಮುಂದುವರೆದು ಹರಿಪಾದಗೈದಿರುವ ಶ್ರೀ ಶ್ರೀ ಶ್ರೀ ವಿದ್ಯಾಮಾನ್ಯ ತೀರ್ಥರು, ಪಲಿಮಾರು–ಭಂಡಾರಿಕೇರಿ ದ್ವಂದ್ವ ಮಠಾಧೀಶರು, ಮತ್ತು ಹರಿಪಾದಗೈದಿರುವ ಶ್ರೀ ಶ್ರೀ ಶ್ರೀ ವಿದ್ಯಾ ಸಮುದ್ರ ತೀರ್ಥರು, ಕಾಣಿಯೂರು ಮಠ ಇವರಿಂದ ಶಿಕ್ಷಣ ಪಡೆದರು. ಬಾಲ್ಯದಲ್ಲಿಯೇ ಬಹಳ ಪ್ರತಿಭೆಗಳಿಂದ ಮಿಂಚಿದ ಇವರು ಅನೇಕ ಲೇಖನಗಳನ್ನು ಬರೆಯುತ್ತಿದ್ದರು. ಸಂಸ್ಕೃತ ಪದವಿ ಪಡೆಯಲು ವಿಫಲಾರದಾಗ, ಸತತವಾಗಿ ಮೂರು ವರುಷಗಳ ಸ್ವ – ಅಧ್ಯಯನದಿಂದಲೇ ಸಂಸ್ಕೃತ ಕಲಿಸಬಲ್ಲ ಶ್ರೇಷ್ಠ ವಿದ್ವಾಂಸರಾಗಿ ಬೆಳೆದರು.

ಬನ್ನಂಜೆ ಗೋವಿಂದಾಚಾರ್ಯರು ಅನೇಕ ಸಂಸ್ಕೃತ ಕೃತಿಗಳನ್ನು ಸರಳವಾದ ಕನ್ನಡಕ್ಕೆ ಅನುವಾದ ಮಾಡಿ ಜನಸಾಮಾನ್ಯರಿಗೆ ತಲುಪುವಂತೆ ಮಾಡಿದ್ದಾರೆ. ಹದಿಮೂರನೆಯ ಶತಮಾನದಲ್ಲಿ, ಆಚಾರ್ಯ ಮಧ್ವರಿಂದಲೇ ಶಿಷ್ಯ ಪಟ್ಟ ಪಡೆದಿರುವ, ಶ್ರೀ ಶ್ರೀ ಶ್ರೀ ಹೃಷೀಕೇಶತೀರ್ಥರು ರಚಿಸಿದ್ದ ಮಧ್ವಾಚಾರ್ಯರ ವ್ಯಾಖ್ಯಾನಗಳನ್ನು, ಸುಮಾರು 2000 ಪುಟಗಳಷ್ಟು ಸುದೀರ್ಘವಾದ ಗ್ರಂಥರೂಪವಾಗಿ ಓದುಗರ ಮುಂದಿಟ್ಟಿದ್ದಾರೆ. ಮಧ್ವಾಚಾರ್ಯರ ಹಲವಾರು ಘನವೆತ್ತ ಕೃತಿಗಳೂ ಕೂಡಾ ಈ ಗ್ರಂಥದ ಭಾಗವಾಗಿವೆ. ಅವರ 'ಆಚಾರ್ಯ ಮಧ್ವ : ಬದುಕು ಬರಹ' ಕೃತಿಯನ್ನು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರವು ಪ್ರಕಟಿಸಿದೆ.

ಬಾಣಭಟ್ಟನ ಕಾದಂಬರಿ, ಕಾಳಿದಾಸನ ಶಾಕುಂತಲಾ, ಶೂದ್ರಕನ 'ಮೃಚ್ಛಕಟಿಕ' ಇತ್ಯಾದಿ ಚಾರಿತ್ರಿಕ ಕೃತಿಗಳು ಇವರ ಅನುವಾದಿತ ಕೃತಿಗಳಲ್ಲಿ ಪ್ರಮುಖವಾದುವು.

ಶ್ರೀ ಶ್ರೀ ಶ್ರೀ ತ್ರಿವಿಕ್ರಮಾಚಾರ್ಯದಾಸರ 'ಆನಂದಮಾಲಾ', ಶ್ರೀ ಶ್ರೀ ಶ್ರೀ ತ್ರಿವಿಕ್ರಮ ಪಂಡಿತರ 'ವಾಯುಸ್ತುತಿ', 'ವಿಷ್ಣುಸ್ತುತಿ' ಇತ್ಯಾದಿ ಕೃತಿಗಳಿಗೆ ಟಿಪ್ಪಣಿಯನ್ನು ಬರೆದಿದ್ದಾರೆ. ಆರು ಉಪನಿಷತ್ತುಗಳಿಗೆ ವ್ಯಾಖ್ಯಾನ ಬರೆದಿದ್ದಾರೆ. ಮಧ್ವಾಚಾರ್ಯರ ಮಹಾಭಾರತದ ತಾತ್ಪರ್ಯ ವ್ಯಾಖ್ಯಾನ ಕೃತಿ 'ಯಮಕ ಭಾರತ' ಕೃತಿಗೆ ಹಾಗೂ ಭಾಗವತ ತಾತ್ಪರ್ಯ' ಕೃತಿಗೆ ಸಹ ಟಿಪ್ಪಣಿಯನ್ನು ಬರೆದಿದ್ದಾರೆ. ಅನೇಕ ಮಂತ್ರಗಳನ್ನು ಕನ್ನಡದಲ್ಲಿ ರಚಿಸಿದ್ದಲ್ಲದೆ, ಪುರುಷಸೂಕ್ತ, ಶ್ರೀ ಮದ್ಭಗವದ್ಗೀತೆ, ಶ್ರೀ ಸೂಕ್ತ, ಶಿವಸೂಕ್ತ, ನರಸಿಂಹ ಸ್ತುತಿ, ತಂತ್ರಸಾರ ಸಂಗ್ರಹಗಳನ್ನು ಕನ್ನಡೀಕರಣಗೊಳಿಸಿರುತ್ತಾರೆ. ಬನ್ನಂಜೆ ಗೋವಿಂದಾಚಾರ್ಯರ 'ಸಂಗ್ರಹ ಭಾಗವತ' ಕೃತಿ ಜನಸಾಮಾನ್ಯರ ಸಮೀಪಕ್ಕೆ ಕೊಂಡೊಯ್ಯುವ ಆಪ್ತ ಕೃತಿ ಎನಿಸಿದೆ. ಬನ್ನಂಜೆಯವರು ಮಧ್ವಾಚಾರ್ಯರ 'ಮಾಧ್ವರಾಮಾಯಣ', ರಾಜರಾಜೇಶ್ವರಿ ಯತಿಗಳ ಮಂಗಲಾಷ್ಟಕ ಕೃತಿಗಳಿಗೆ ಕನ್ನಡದಲ್ಲಿ ಪುನರ್ಜನ್ಮ ನೀಡಿದ್ದಾರೆ. 'ಉಡುಪಿಯ ಕೃಷ್ಣನ ಕಂಡಿರಾ' ಎಂಬ ಸುಂದರ ಕೀರ್ತನೆಗಳನ್ನೂ ರಚಿಸಿದ್ದಾರೆ. ಇವೆಲ್ಲಾ ಬನ್ನಂಜೆ ಗೋವಿಂದಾಚಾರ್ಯರ ಹಲವಾರು ಕೃತಿಗಳಲ್ಲಿ ಕೆಲವು ಮಾತ್ರವಾಗಿವೆ.

ಬನ್ನಂಜೆಯವರದ್ದು ಬಹುಮುಖ ಸೇವೆ. ಅವರು ಉದಯವಾಣಿಯ ಪ್ರಾರಂಭದ ಬಹಳಷ್ಟು(ಸರಿ ಸುಮಾರು 30ವರುಷಗಳು)

ವರ್ಷಗಳಲ್ಲಿ ಅಲ್ಲಿನ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದರು. ಪ್ರಾಚೀನ ಗ್ರಂಥಗಳನ್ನು ಉಳಿಸಿ ಪೋಷಿಸುವ ಕಾಯಕದಲ್ಲಿ ಅವರ ಕಾಯಕ ವಿಶ್ವದ ಪ್ರತಿಷ್ಠಿತ ಸಂಸ್ಥೆಗಳ ಸಹಯೋಗದಲ್ಲಿ ಸಂದಿದೆ.

ದಿವಂಗತ ಜಿ.ವಿ. ಅಯ್ಯರ್ ಅವರ ಸಂಸ್ಕೃತ ಚಲನಚಿತ್ರ 'ಶ್ರೀ ಶಂಕರಾಚಾರ್ಯ', ಕನ್ನಡದ 'ಶ್ರೀ ಮಧ್ವಾಚಾರ್ಯ', ತಮಿಳಿನ 'ಶ್ರೀ ರಾಮಾನುಜಾಚಾರ್ಯ' ಚಲನಚಿತ್ರಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ಕೊಡುಗೆಯನ್ನಿತ್ತಿದ್ದಾರೆ.

ಬನ್ನಂಜೆ ಗೋವಿಂದಾಚಾರ್ಯರ ಪ್ರವಚನಗಳು ಹಲವಾರು ಶ್ರಾವ್ಯ ಮಾಧ್ಯಮಗಳಲ್ಲಿ ಸಹಾ ಅಸಂಖ್ಯಾತ ಜನಸ್ತೋಮವನ್ನು ಪ್ರಭಾವಿಸುತ್ತಾ ಸಾಗಿವೆ.

ಆಚಾರ್ಯರನ್ನು ಅನೇಕ ಗೌರವ, ಬಿರುದು ಬಾವಲಿಗಳು ಅರಸಿಕೊಂಡು ಬಂದಿದ್ದವು. ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಶ್ರೇಷ್ಠ ಅನುವಾದಕ್ಕಾಗಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಣಿಪಾಲದ ಪ್ರತಿಷ್ಠಿತ ವಿದ್ಯಾ ಸಮೂಹದ ಫೆಲೋಷಿಪ್ ಮುಂತಾದ ಪ್ರತಿಷ್ಠಿತ ಗೌರವಗಳು ಲಭಿಸಿದೆ. ಅದಮಾರು ಪೀಠವು ಅವರನ್ನು 'ವಿದ್ಯಾವಾಚಸ್ಪತಿ' ಬಿರುದಿನಿಂದ ಆಶೀರ್ವದಿಸಿತ್ತು. ಕರ್ನಾಟಕ ಸರಕಾರವು ವೈದಿಕ ಕ್ಷೇತ್ರದ ಕೊಡುಗೆಗಳಿಗೆ ಇವರನ್ನು ಪುರಸ್ಕರಿಸಿತ್ತು. ಫಲಿಮಾರು ಮಠವು 'ಪ್ರತಿಭಾಂಬುಧಿ' ಎಂಬ ಬಿರುದಿನಿಂದ ಆಶೀರ್ವದಿಸಿತ್ತು. ಅಖಿಲ ಭಾರತ ಮಾಧ್ವ ಮಹಾ ಮಂಡಲವು 'ಶಾಸ್ತ್ರ ಸವ್ಯಸಾಚಿ' ಎಂದು ಪುರಸ್ಕರಿಸಿತ್ತು. ಪೇಜಾವಾರ ಮಠವು, ಶ್ರೀಕೃಷ್ಣಾನುಗ್ರಹ ಪ್ರಶಸ್ತಿಯಿಂದ ಆಶೀರ್ವದಿಸಿತ್ತು. ಕಬೀರಾನಂದ ಆಶ್ರಮದ 'ಆರೂಢಶ್ರೀ' ಪ್ರಶಸ್ತಿ ಅವರಿಗೆ ಸಂದಿತ್ತು. 'ಸಾಹಿತ್ಯ ಸಾರ್ವಭೌಮ', 'ಸಂಶೋಧನ ವಿಚಕ್ಷಣ', 'ಪಂಡಿತ ಶಿರೋಮಣಿ', 'ಪಂಡಿತರತ್ನ', 'ವಿದ್ಯಾರತ್ನಾಕರ' ಬಿರುದುಗಳು ಇವರನ್ನು ಆರಿಸಿಕೊಂಡು ಬಂದಿದ್ದವು. ಅನೇಕ ವ್ಯಕ್ತಿಗಳು ಶ್ರೀಯುತರನ್ನು ಗುರು ಸ್ಥಾನದಲ್ಲಿರಿಸಿಕೊಂಡು ತಮ್ಮ ಬದುಕನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ.

ಬನ್ನಂಜೆ ಗೋವಿಂದಾಚಾರ್ಯರು 1979ರ ವರ್ಷದಲ್ಲಿ ಅಮೆರಿಕದ ಪ್ರಿನ್ಸ್ಟನ್ ನಗರದಲ್ಲಿ ಜರುಗಿದ 'ವರ್ಲ್ಡ್ ಕಾನ್ಫರೆನ್ಸ್ ಆನ್ ರಿಲಿಜನ್ ಅಂಡ್ ಪೀಸ್' – 'ವಿಶ್ವ ಧಾರ್ಮಿಕ ಮತ್ತು ಶಾಂತಿ ಸಮ್ಮೇಳನ' ದಲ್ಲಿ ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ ಪ್ರತಿನಿಧಿಸಿದ್ದರು. 1980ರಲ್ಲಿ ನಡೆದ ವಿಶ್ವ ಸಂಸ್ಕೃತ ಮೇಳದಲ್ಲಿಯೂ ಭಾಗವಹಿಸಿದ್ದರು. ದಕ್ಷಿಣ ಕನ್ನಡದಲ್ಲಿ ನಡೆದ ಸಂಸ್ಕೃತ ಪರಿಷತ್ತಿನ ಅಧ್ಯಕ್ಷತೆಯ ಗೌರವ ಮತ್ತು ಉಡುಪಿಯ ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವೂ ಅವರಿಗೆ ಸಂದಿತ್ತು.

ಈ ಮಹಾನ್ ವಿದ್ವಾಂಸರ ಭಾಗವತ ಉಪನ್ಯಾಸಗಳನ್ನು ಪ್ರತ್ಯಕ್ಷವಾಗಿ ಕೇಳಿ, ಮಾರ್ಗದರ್ಶನ ಪಡೆದುಕೊಳ್ಳುವ ಸೌಭಾಗ್ಯದಿಂದ ಇಂದು ಲೋಕ ವಂಚಿತವಾಯಿತು. ಇಂಥಹ ಮಹಾತ್ಮರ ದರ್ಶನದಿಂದ ಪುನೀತರಾಗುವುದೇ ಅದ್ಯಾತ್ಮ ಚಿಂತಕ ಸಮಾಜದ ಸೌಭಾಗ್ಯ. ಮಹಾನ್ ಚೇತನ ವಿದ್ಯಾವಾಚಸ್ಪತಿ ಬನ್ನಂಜೆ ಶ್ರೀ ಗೋವಿಂದಾಚಾರ್ಯರಿಗೆ ನನ್ನ ಭಕ್ತಿಪೂರ್ವಕ ನಮನ.

***ಉಡುಪಿ ಶ್ರೀಹರಿ ಭಟ್,***
ನವದೆಹಲಿ.
(ವಿವಿಧ ಮೂಲಗಳಿಂದ)

## ಅವರ ದಾರ್ಶನಿಕತೆಯ ಒಳಗೆ ಒಬ್ಬ ಕವಿಯಿದ್ದ

ಬನ್ನಂಜೆ ಗೋವಿಂದಾಚಾರ್ಯರದು ಅನನ್ಯ ಪ್ರತಿಭೆ. ಆಧುನಿಕ ಪರಿಭಾಷೆಗಳನ್ನು ಬಳಸಿ ಅವರು ಪರಂಪರೆಯನ್ನು ಸಮರ್ಥಿಸಿಕೊಳ್ಳುವ ರೀತಿಗೆ ಮಾರು ಹೋದವರಲ್ಲಿ ನಾನೂ ಒಬ್ಬ. ಹಲವು ವೇದಿಕೆಗಳಲ್ಲಿ ನಾನು ಅವರೊಂದಿಗಿದ್ದೆ. ಅವರ ಮಗಳು ವೀಣಾ ನನ್ನ ವಿದ್ಯಾರ್ಥಿನಿ.

ಭಾಷಣಗಳಲ್ಲಿ ಬನ್ನಂಜೆಯವರು ಸಂಸ್ಕೃತ ಶ್ಲೋಕಗಳನ್ನು ಹೇರಳವಾಗಿ ಬಳಸುತ್ತಾ, ವ್ಯಾಖ್ಯಾನಿಸುತ್ತಾ ಜನರನ್ನು ಮೋಡಿ ಮಾಡುತ್ತಿದ್ದರು. ಅವರ ನಂತರ ಭಾಷಣ ಮಾಡುವ ನಾನು ತುಳು ಪಾಡ್ದನಗಳನ್ನು ಉದಾಹರಿಸುತ್ತಾ, ಅವೈದಿಕ ಪರಂಪರೆಯ ಬಗ್ಗೆ ಜನರ ಗಮನ ಸೆಳೆಯುತ್ತಿದ್ದೆ. ಬನ್ನಂಜೆಯವರ ಸಂಸ್ಕೃತ ನನಗೆ ಅರ್ಥವಾಗುತ್ತಿರಲಿಲ್ಲ, ನನ್ನ ಪಾಡ್ದನ ಅವರಿಗೂ ತಿಳಿಯುತ್ತಿರಲಿಲ್ಲ. ಪ್ರೇಕ್ಷಕರು ಇಬ್ಬರಿಗೂ ಚಪ್ಪಾಳೆ ತಟ್ಟುತ್ತಿದ್ದರು... ಈಗ ಇವೆಲ್ಲ ಕೇವಲ ನೆನಪುಗಳು.

ತನ್ನ ಸಮಕಾಲೀನ ವಿದ್ವಾಂಸರಿಂದ ಬನ್ನಂಜೆ ಬಹಳ ಮುಂದಿದ್ದರು. ಮಾಧ್ವ ಪರಂಪರೆಯ ಬಗ್ಗೆ ಅವರಷ್ಟು ಚೆನ್ನಾಗಿ ಮಾತಾಡಬಲ್ಲ, ಬರೆಯಬಲ್ಲ ಇನ್ನೊಬ್ಬ ವಿದ್ವಾಂಸ ಸದ್ಯ ಇಲ್ಲ. ಅವರ ದಾರ್ಶನಿಕತೆಯೊಳಗೊಬ್ಬ ಕವಿಯಿದ್ದ. ಬನ್ನಂಜೆ ಇನ್ನಿಲ್ಲ. ಉಡುಪಿ ಒಬ್ಬೊಬ್ಬರನ್ನೇ ಕಳಕೊಂಡು ಬರಡಾಗುತ್ತಿದೆ.


***ಡಾ. ಪುರುಷೋತ್ತಮ ಬಿಳಿಮಲೆ***

## ಬನ್ನಂಜೆ ಗೋವಿಂದಾಚಾರ್ಯರಿಗೆ ಶ್ರದ್ಧಾಂಜಲಿ



ಕನ್ನಡ ಮತ್ತು ಸಂಸ್ಕೃತದಲ್ಲಿ ಸುಮಾರು ಎಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ಬರೆದು ಸಾರಸ್ವತ ಲೋಕಕ್ಕೆ ಅಪಾರ ಕೊಡುಗೆಗಳನ್ನು ನೀಡಿದ ಪದ್ಮಶ್ರೀ ಬನ್ನಂಜೆ ಗೋವಿಂದಾಚಾರ್ಯ ಅವರು ದಿನಾಂಕ 13.12.2020ರಂದು ವಿಧಿವಶರಾಗಿದ್ದಾರೆ. ಶ್ರೇಷ್ಠ ವಾಗ್ಮಿಗಳೂ ಆಗಿದ್ದ ಬನ್ನಂಜೆ ಗೋವಿಂದಾಚಾರ್ಯ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

## ಹಿರಿಯ ಪತ್ರಕರ್ತ ರಾಘವೇಂದ್ರ ಜೋಷಿ ನಿಧನಕ್ಕೆ ಸಂತಾಪ



ಕನ್ನಡ ಹಿರಿಯ ಪತ್ರಕರ್ತ, ಕನ್ನಡಪರ ಹೋರಾಟಗಾರ, ಲೇಖಕ, ಸಂಘಟಕ ಬೆಳಗಾವಿಯ ರಾಘವೇಂದ್ರ ಜೋಷಿ ಅವರ ನಿಧನಕ್ಕೆ ದೆಹಲಿ ಕನ್ನಡಿಗ, ತುಳುವೆರ್ ಪತ್ರಿಕೆಗಳ ಸಂಪಾದಕ ಬಾ. ಸಾಮಗ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಬೆಳಗಾವಿಯಲ್ಲಿ ಮರಾಠಿಗರ ಪ್ರಾಬಲ್ಯಕ್ಕೆ ತಡೆಯೊಡ್ಡಿ ಹಲವಾರು ಕನ್ನಡ ಕಾರ್ಯಕ್ರಮಗಳನ್ನು ಸಂಘಟಿಸಿ ಕನ್ನಡಿಗರಲ್ಲಿ ಜಾಗೃತಿ ಹುಟ್ಟಿಸಿದ್ದ ಜೋಷಿ ಅವರು ನಾಡೋಜ ದಿನಪತ್ರಿಕೆ ಹಾಗೂ ನಿರ್ಭೀತ ವಾರಪತ್ರಿಕೆ ಸಂಪಾದಕರಾಗಿದ್ದರು. ಅನೇಕ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದ ಇವರು ದಿಲ್ಲಿಯಲ್ಲಿ ಕನ್ನಡ ಪ್ರಗತಿ ಕುರಿತು ವಿಶೇಷ ಕಾಳಜಿ ವಹಿಸಿದ್ದರಲ್ಲದೆ ಇವರು ಸ್ಥಾಪಿಸಿದ ನಾಡೋಜ ಪ್ರತಿಷ್ಠಾನದಿಂದ ಗಣ್ಯ ಹೊರನಾಡ ಕನ್ನಡಿಗರಿಗೆ ಪ್ರಶಸ್ತಿ ನೀಡಿ ಗೌರವಿಸಿದ್ದರು. ಇವರ ಸ್ಮಾರಕ ಕರ್ನಾಟಕ ಸರಕಾರವು ಬೆಳಗಾವಿಯ ರಸ್ತೆ, ಪಾರ್ಕಿಗೆ ಇವರ ಹೆಸರನ್ನಿಡಬೇಕು, ಕನ್ನಡ ಕೇಂದ್ರ ಸ್ಥಾಪಿಸಬೇಕು, ಕನ್ನಡ ಪತ್ರಿಕಾ ಉತ್ಸವ ನಡೆಸಿ ಇವರ ಹೆಸರಲ್ಲಿ ಪ್ರತಿಷ್ಠಿತ ಪತ್ರಕರ್ತರೊಬ್ಬರಿಗೆ ದೊಡ್ಡ ಮೊತ್ತದ ಪ್ರಶಸ್ತಿ ನೀಡಬೇಕೆಂದು ಸಾಮಗ ಆಗ್ರಹಿಸಿದ್ದಾರೆ.

# ಹೊರನಾಡಲ್ಲಿ ಕನ್ನಡದ ಕಂಪು

*ಲೇಖಕಿ, ಕವಯತ್ರಿ ಶ್ರೀಮತಿ ರತ್ನಶ್ರೀ ಶ್ರೀಧರ್ ಭಿವಾಡಿ ಕನ್ನಡ ಸಂಘದ ಸಕ್ರಿಯ ಸದಸ್ಯರಾಗಿದ್ದರು.ಅಲ್ಲದೆ ದೆಹಲಿ ಎನ್.ಸಿ.ಆರ್. ಭಾಗದ ಕನ್ನಡ ಸಂಘಗಳೊಂದಿಗೆ ಭಾಗವಹಿಸುತ್ತಿದ್ದರು. ಈಚೆಗೆ ಅವರು ಚೆನ್ನೈಗೆ ವರ್ಗವಾಗುವ ಮುನ್ನ ಇಲ್ಲಿನ ಕನ್ನಡ ಪರಿಸರದೊಂದಿಗೆ ಕಳೆದ ಸವಿನೆನಪುಗಳನ್ನು ಇಲ್ಲಿ ಆಪ್ತವಾಗಿ ಹಂಚಿಕೊಂಡಿದ್ದಾರೆ.*

**–ಸಂಪಾದಕ**

ನಾವು ಒಂದು ವರ್ಷ ಹತ್ತು ತಿಂಗಳ ಈ ಸಣ್ಣ ಕಾಲಾವಧಿಯಲ್ಲಿ ದೆಹಲಿ ಪರಿಸರದಲ್ಲಿ ನೆಲೆಸಿ ಇಲ್ಲಿ ಪಡೆದ ಮರೆಯಲಾರದ ಕನ್ನಡದ ಸವಿ ನೆನಪುಗಳ ಮೂಟೆ ಹೊತ್ತು ಇಲ್ಲಿಂದ ಚೆನ್ನೈಗೆ ಹೊರಡುತ್ತಿದ್ದೇವೆ. ಹೊರನಾಡಲ್ಲಿ ಪಸರಿಸಿರುವ ಕನ್ನಡದ ಕಂಪಿನ ಬಗ್ಗೆ ನನ್ನ ಅನಿಸಿಕೆಯನ್ನು ಕರುನಾಡಿನ ಜನರೊಂದಿಗೆ ಹಂಚಿಕೊಳ್ಳುವ ತವಕ ನನ್ನದು.

2019 ರ ಫೆಬ್ರವರಿ ತಿಂಗಳನಲ್ಲಿ ನನ್ನ ಪತಿ ಡಾ. ಶ್ರೀಧರ್ ಅವರೊಂದಿಗೆ ಬೆಂಗಳೂರಿನಿಂದ ದೆಹಲಿಗೆ ಬಂದಿಳಿದಾಗ ನನಗೆ ಮನದಲ್ಲಿ ದುಗುಡ ತುಂಬಿತ್ತು. ಗುರುಗ್ರಾಮದ ಅಮಿಟಿ ಯೂನಿವರ್ಸಿಟಿ ಕ್ಯಾಂಪಸ್‌ನಲ್ಲಿ ನಾವು ವಾಸ್ತವ್ಯ ಹೂಡಿದಾಗ ಇಲ್ಲಿನ ಪ್ರಕೃತಿ ಸೌಂದರ್ಯ ಮನಸೂರೆಗೊಂಡಿತ್ತು. ಕಾಡಿನ ಸುಂದರ ಪರಿಸರ, ನೂರಾರು ವಿಧದ ಪಕ್ಷಿ ಪ್ರಬೇಧಗಳ ಆವಾಸಸ್ಥಾನ ಎಲ್ಲವೂ ಚೆನ್ನಾಗಿತ್ತು. ಆದರೆ ಇಡೀ ಕ್ಯಾಂಪಸ್‌ನಲ್ಲಿ ನಮ್ಮೊಬ್ಬರದೇ ಕನ್ನಡದ ಕುಟುಂಬವಿದ್ದುದ್ದರಿಂದ ಕನ್ನಡಿಗರಿಲ್ಲದ ಊರಲ್ಲಿ ನೆಲೆಸುವುದು ಬೇಸರವೆನಿಸಿತ್ತು.

ಹೀಗೇ ಒಂದು ತಿಂಗಳು ಕಳೆಯುವ ಹೊತ್ತಿಗೆ ಅಮಿಟಿ ಯೂನಿವರ್ಸಿಟಿಯಲ್ಲಿ ಬೋಧಕರಾಗಿ ಕೆಲಸ ಮಾಡುತ್ತಿರುವ ಭಿವಾಡಿ ನಿವಾಸಿ ನವೀನ್ ಅವರ ಮೂಲಕ, ಗುರುಗ್ರಾಮ ಕನ್ನಡ ಸಂಘ ಮತ್ತು ಭಿವಾಡಿ ಕನ್ನಡ ಸಂಘದವರ ಪರಿಚಯವಾಯಿತು. ಹಾಗೇ ಗುರುಗ್ರಾಮದಲ್ಲಿ ನಡೆವ "ಯುಗಾದಿ ಸಂಭ್ರಮ" ಕಾರ್ಯಕ್ರಮಕ್ಕೆ ನಮ್ಮನ್ನು ಆಹ್ವಾನಿಸಿದರು. ಅಲ್ಲಿಗೆ ಹೋದಾಗ ಇಷ್ಟೊಂದು ಕನ್ನಡ ಕುಟಂಬಗಳು ದೆಹಲಿ ಪರಿಸರದಲ್ಲಿ ನೆಲೆಸಿರುವ ಬಗ್ಗೆ ತಿಳಿದು ಕಳೆದು ಹೋದ ಅಮೂಲ್ಯ ವಸ್ತು ಮತ್ತೆ ದೊರಕಿದ ಅನುಭವವಾಯಿತು. ಹಾಗೆಯೇ ದೆಹಲಿ ಕರ್ನಾಟಕ ಸಂಘದ ಪರಿಚಯ ದೊರೆತ ಮೇಲೆ ನಮಗೆ ನಮ್ಮ ನಾಡಿನಿಂದ ಹೊರಗೆ ನೆಲೆಸಿದ್ದೇವೆ ಎಂಬುದನ್ನು ಮರೆಯುವಷ್ಟು ಕನ್ನಡದ ವಾತಾವರಣ ದೊರೆಯಿತು.

ಹೊರನಾಡಲ್ಲಿದ್ದುಕೊಂಡು ಕನ್ನಡವನ್ನು ಕಟ್ಟಿ ಬೆಳೆಸುವಲ್ಲಿ ಕಾರಣಕರ್ತರಾಗಿರುವ ದೆಹಲಿ, ಗುರುಗ್ರಾಮ ಮತ್ತು ಭಿವಾಡಿ ಕನ್ನಡ ಸಂಘಗಳಿಗಾಗಿ ಶ್ರಮಿಸಿದ ಮತ್ತು ಈಗಲೂ ಶ್ರಮಿಸುತ್ತಿರುವ ಮಹನೀಯರಾದ ಎಲ್ಲಾ ಪದಾಧಿಕಾರಿಗಳು ಮತ್ತು ಕಾರ್ಯಕರ್ತರೂ ವಂದನಾರ್ಹರು.

ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳಿಗೊಂದೆರಡರಂತೆ ನಿರಂತರವಾಗಿ ಕನ್ನಡ ಕಾರ್ಯಕ್ರಮಗಳು ನಡೆಯುತ್ತಿದ್ದವು. ಇದರಿಂದಾಗಿ ಅಲ್ಲಿ ನಡೆಯುತ್ತಿದ್ದ ನೃತ್ಯ, ನಾಟಕ, ಯಕ್ಷಗಾನ, ನೃತ್ಯರೂಪಕ, ಗಾಯನ, ಚರ್ಚೆ, ಪುಸ್ತಕ ಬಿಡುಗಡೆ, ಸಂವಾದ, ಸಾಹಿತ್ಯ ಗೋಷ್ಠಿ, ಜನಪದ ಕಾರ್ಯಕ್ರಮ ಹೀಗೆ ಹಲವಾರು ರೀತಿಯ ಕನ್ನಡ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಲು ನಮಗೆ ಸಾಧ್ಯವಾಯಿತು. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಸಹಕಾರದಿಂದ ಈ ಎಲ್ಲಾ ಕಾರ್ಯಕ್ರಮಗಳನ್ನು ಇಲ್ಲಿನ ಪದಾದಿಕಾರಿಗಳು ಅಚ್ಚುಕಟ್ಟಾಗಿ ನಡೆಸುತ್ತಿದ್ದಾರೆ.

ದೆಹಲಿ ಕರ್ನಾಟಕ ಸಂಘದಲ್ಲಿ ನಾಡಿನ ಸಾಧಕರ ಜಯಂತೋತ್ಸವಗಳನ್ನು ಅರ್ಥಪೂರ್ಣವಾಗಿ ಆಚರಿಸುವುದಲ್ಲದೇ ಹಬ್ಬ, ಜಾತ್ರೆ, ವಾರ್ಷಿಕ ಕ್ರೀಡೋತ್ಸವಗಳನ್ನೂ ಆಚರಿಸುತ್ತಾರೆ. ಸುತ್ತ ಮುತ್ತ ನೆಲಸಿರುವ ಕನ್ನಡಿಗರೆಲ್ಲಾ ಒಟ್ಟುಗೂಡಿ ಸಂಭ್ರವಿಸುವ ಸೊಬಗನ್ನು ಅನುಭವಿಸಿಯೇ ತೀರಬೇಕು.

ಒಟ್ಟಿನಲ್ಲಿ ದೂರದ ದೆಹಲಿ ಪರಿಸರದಲ್ಲೂ ಕನ್ನಡದ ಹೂ ಬಳ್ಳಿ ಹೂ ಬಿಡುತ್ತಿರುವುದು ಸಂತಸದ ವಿಷಯ. ಕನ್ನಡ ನಾಡಿನಿಂದ ದೂರದಲ್ಲಿದ್ದುಕೊಂಡು ಕನ್ನಡಪರ ಚಟುವಟಿಕೆಗಳನ್ನು ನಡೆಸುತ್ತಿರುವ ದೆಹಲಿ ಕರ್ನಾಟಕ ಸಂಘದ ಕಾರ್ಯವ್ಯಾಪ್ತಿ ಬಹು ವಿಸ್ತಾರವಾಗಿದೆ. ಇದರ ಹುಟ್ಟು ಮತ್ತು ಬೆಳವಣಿಗೆಗೆ ನೂರಾರು ಮಹನೀಯರು ತಮ್ಮ ನಿಸ್ವಾರ್ಥ ಸೇವೆ ಸಲ್ಲಿಸಿದ್ದಾರೆ ಮತ್ತು ಸಲ್ಲಿಸುತ್ತಿದ್ದಾರೆ.

ದೆಹಲಿಯಲ್ಲಿ ವಾಸವಾಗಿರುವ ಕನ್ನಡಿಗರನ್ನೆಲ್ಲಾ ಸಾಹಿತ್ಯಕ ಮತ್ತು ಸಾಂಸ್ಕೃತಿಕವಾಗಿ ಒಗ್ಗೂಡಿಸುವ ಸಲುವಾಗಿ ಹಲವಾರು ಮಹನೀಯರ ಪರಿಶ್ರಮದಿಂದ ದೆಹಲಿ ಕರ್ನಾಟಕ ಸಂಘವನ್ನು 1948ರಲ್ಲಿ ಸ್ಥಾಪನೆ ಮಾಡಲಾಗಿದೆ. ಆ ನಂತರ ದೆಹಲಿಯ ಹೃದಯ ಭಾಗವಾದ ಆರ್.ಕೆ.ಪುರಂನಲ್ಲಿ ಸಂಘಕ್ಕೆ ಸ್ವಂತ ಜಾಗವೊಂದು ಮಂಜೂರಾದ ನಂತರ ಅಲ್ಲಿಯೇ ಸಂಘದ ಕಟ್ಟಡವನ್ನು ಕಟ್ಟಿದ್ದರು.

> "ನಾವು ದೆಹಲಿಯಿಂದ ಸುಮಾರು 45 ಕಿ.ಮೀ. ದೂರದಲ್ಲಿರುವುದರಿಂದಾಗಿ ದೆಹಲಿಯಲ್ಲಿ ನಡೆಯುವ ಎಲ್ಲಾ ಕನ್ನಡ ಕಾರ್ಯಕ್ರಮಗಳಲ್ಲಿ ಭಾಗವಹಿಸಲಾಗದಿದ್ದರೂ, ಸಾಧ್ಯವಾದಾಗಲೆಲ್ಲಾ ಕನ್ನಡದ ವಾತಾವರಣದಲ್ಲಿ ವಿಹರಿಸುವ ಅವಕಾಶ ನಮಗೆ ದೊರೆಯಿತು. ದೆಹಲಿ, ಗುರುಗ್ರಾಮ ಮತ್ತು ಭಿವಾಡಿ ಕನ್ನಡಿಗರು ತಮ್ಮ ಎಲ್ಲಾ ವಾಟ್ಸಪ್ ಗುಂಪುಗಳಲ್ಲಿ ನಮ್ಮನ್ನು ಸೇರಿಸಿದರಲ್ಲದೇ, ಅತ್ಯಂತ ಪ್ರೀತಿ ಗೌರವಗಳಿಂದ ಕಂಡಿದ್ದಾರೆ."

ದೆಹಲಿ ಕರ್ನಾಟಕ ಸಂಘದ ಕನ್ನಡ ಕಾರ್ಯಕ್ರಮಗಳನ್ನು ನಡೆಸಲು ತನ್ನದೇ ಆದ ಸಭಾಂಗಣವನ್ನು ಹೊಂದಬೇಕೆನ್ನುವ ಕನಸನ್ನು ಸಾಕಾರಗೊಳಸಲು ಶ್ರಮಿಸಿದ ಹಲವಾರು ಮಹನೀಯರ ಸಹಕಾರದಿಂದ ಈ ಹಿಂದೆ ಕಟ್ಟಿದ್ದ ಕಟ್ಟಡವನ್ನು ಕೆಡವಿ ಅದೇ ಜಾಗದಲ್ಲಿಯೇ ಸುಸಜ್ಜಿತವಾದ ಸಭಾಂಗಣವನ್ನೊಳಗೊಂಡ ವಿಶಾಲವಾದ ಬೃಹತ್ ಕಟ್ಟಡವನ್ನು 2005ರಲ್ಲಿ ಕಟ್ಟಲಾಗಿದೆ.

ಇಲ್ಲಿನ ಸುಸಜ್ಜಿತವಾದ ಸಭಾಂಗಣದಲ್ಲಿ ನಿರಂತರವಾದ ಕನ್ನಡಪರ ಕಾರ್ಯಕ್ರಮಗಳು ನಡೆಯುತ್ತಿವೆ. ಕನ್ನಡ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಜೊತೆಗೆ ಸಾಮಾಜಿಕ ಕಳಕಳಿಯ ಕೆಲಸಗಳಲ್ಲೂ ತೊಡಗಿಸಿಕೊಂಡಿದೆ.

ಇಲ್ಲಿ ಕನ್ನಡಿಗರಿಗೆ ಸಂಗೀತ, ಯೋಗ ತರಬೇತಿ ಮತ್ತು ವೈದ್ಯಕೀಯ ತಪಾಸಣೆಗಳನ್ನು ಉಚಿತವಾಗಿ ನಡೆಸುತ್ತಿದ್ದಾರೆ. ಪ್ರವಾಸಿಗರಿಗೆ ಕಡಿಮೆ ದರದಲ್ಲಿ ವಸತಿ ಸೌಲಭ್ಯ, ಐ.ಎ.ಎಸ್. ಅಭ್ಯರ್ಥಿಗಳ ತರಬೇತಿಗೆ ಸ್ಥಳಾವಕಾಶ, ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಮುಂತಾದ ಅನೇಕ ಸಾಮಾಜಿಕ ಕಾರ್ಯಗಳನ್ನೂ ಸಹ ದೆಹಲಿ ಕರ್ನಾಟಕ ಸಂಘ ನಡೆಸಿಕೊಂಡು ಬರುತ್ತಿದೆ.

ಕನ್ನಡ ರಾಜ್ಯೋತ್ಸವದ ಅಂಗವಾಗಿ ಇಲ್ಲಿನ ಸಾಧಕರಿಗೆ ವರ್ಷದ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಈ ಬಾರಿ ಕೋವಿಡ್‌ನಿಂದಾಗಿ ಆನ್‌ಲೈನ್‌ನಲ್ಲಿ ಅತ್ಯಂತ ಶಿಸ್ತುಬದ್ಧವಾಗಿ ಕಾರ್ಯಕ್ರಮವನ್ನು ಆಯೋಜಿಸಿ ಯಶಸ್ವಿಯಾಗಿ ನಡೆಸಿದರು.

ಅಲ್ಲದೇ ದೆಹಲಿ ಕರ್ನಾಟಕ ಸಂಘವು "ಅಭಿಮತ" ಎನ್ನುವ ಮಾಸ ಪತ್ರಿಕೆಯನ್ನು

ಸುಮಾರು 30 ವರ್ಷಗಳಿಂದಲೂ ತಪ್ಪದೇ ಪ್ರತಿ ತಿಂಗಳೂ ಹೊರ ತರುತ್ತಿದೆ. ಈಗ ಒಟ್ಟು 32 ಪುಟಗಳ ಈ ಪತ್ರಿಕೆಯಲ್ಲಿ ಆಯಾ ತಿಂಗಳಿನಲ್ಲಿ ದೆಹಲಿ ಮತ್ತು ಅದರ ಸುತ್ತ ಮುತ್ತಲಿನ ಹಲವಾರು ಕನ್ನಡ ಸಂಘಗಳಲ್ಲಿ ನಡೆದ ಕಾರ್ಯಕ್ರಮಗಳ ವರದಿ ಸುತ್ತಲಿನ ಹೊರನೋಟದ ಜೊತೆಗೆ ಸೃಜನಾತ್ಮಕ ಬರವಣಿಗೆಗಳೂ ಇದರಲ್ಲಿ ಪ್ರಕಟವಾಗುತ್ತಿವೆ. ಕಳೆದ ವರ್ಷ ದೆಹಲಿ ಮತ್ತು ಭಿವಾಡಿಯಲ್ಲಿ ನಡೆದ ಮೂರು ಕಾರ್ಯಕ್ರಮಗಳ ಬಗ್ಗೆ ನಾನು ಬರೆದಿದ್ದ ವರದಿಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿದ್ದವು.

ನಾವು ದೆಹಲಿಯಿಂದ ಸುಮಾರು 45 ಕಿ.ಮೀ. ದೂರದಲ್ಲಿರುವುದರಿಂದಾಗಿ ದೆಹಲಿಯಲ್ಲಿ ನಡೆಯುವ ಎಲ್ಲಾ ಕನ್ನಡ ಕಾರ್ಯಕ್ರಮಗಳಲ್ಲಿ ಭಾಗವಹಿಸಲಾಗದಿದ್ದರೂ, ಸಾಧ್ಯವಾದಾಗಲೆಲ್ಲಾ ಕನ್ನಡದ ವಾತಾವರಣದಲ್ಲಿ ವಿಹರಿಸುವ ಅವಕಾಶ ನಮಗೆ ದೊರೆಯಿತು. ದೆಹಲಿ, ಗುರುಗ್ರಾಮ ಮತ್ತು ಭಿವಾಡಿ ಕನ್ನಡಿಗರು ತಮ್ಮ ಎಲ್ಲಾ ವಾಟ್ಸಪ್ ಗುಂಪುಗಳಲ್ಲಿ ನಮ್ಮನ್ನು ಸೇರಿಸಿದರಲ್ಲದೇ, ಅತ್ಯಂತ ಪ್ರೀತಿ ಗೌರವಗಳಿಂದ ಕಂಡಿದ್ದಾರೆ. ಅವರ ಆತ್ಮೀಯತೆಗೆ ನಮ್ಮ ಅನಂತ ವಂದನೆಗಳು.

ಹೀಗೇ ಒಂದು ವರ್ಷ ಕಳೆಯುವ ಹೊತ್ತಿಗೆ ಕೋವಿಡ್ ಮಹಾಮಾರಿ ನಮ್ಮ ದೇಶದೊಳಗೆ ಕಾಲಿಟ್ಟಿದ್ದರಿಂದಾಗಿ ಎಲ್ಲಾ ನೇರ ಸಂಪರ್ಕದ ಕಾರ್ಯಕ್ರಮಗಳೆಲ್ಲಾ ನಿಂತು ಹೋದವು. ಆದರೂ ದೆಹಲಿ ಕನ್ನಡ ಸಂಘದವರು ನಿರಂತರವಾಗಿ ಹಲವಾರು ಆನ್‌ಲೈನ್ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮುನ್ನಡೆಸುತ್ತಿದ್ದಾರೆ. ಹಾಗೆಯೇ ಪ್ರತಿ ತಿಂಗಳೂ ತಪ್ಪದೇ ಅಭಿಮತ ಪತ್ರಿಕೆಯನ್ನೂ ಪ್ರಕಟಿಸುತ್ತಿದ್ದಾರೆ.

ಇನ್ನೊಂದು ಸಂತೋಷಕರ ವಿಷಯವೆಂದರೆ, ದೆಹಲಿಯಲ್ಲಿ ಕರ್ನಾಟಕ ಸರ್ಕಾರದ ಅನುದಾನಿತ ಕನ್ನಡ ಶಾಲೆ ಇದೆ. ಈ ಶಾಲೆ ರಾಷ್ಟ್ರಪತಿ ಭವನದ ಹತ್ತಿರದ ಪ್ರತಿಷ್ಠಿತ ಪ್ರದೇಶದಲ್ಲಿದೆ. ಅಂದು ದೆಹಲಿಗೆ ವಲಸಿಗರಾಗಿ ಬಂದಿದ್ದ ಕನ್ನಡಿಗರ ಮಕ್ಕಳಿಗಾಗಿ ಸುಮಾರು 60 ವರ್ಷಗಳ ಹಿಂದೆಯೇ ಈ ಶಾಲೆಯನ್ನು ಪ್ರಾರಂಭಿಸಲಾಗಿದೆ.

ಅಂದು ಕೇವಲ ಕನ್ನಡಿಗರ ಕೆಲವು ಮಕ್ಕಳಿಂದ ಪ್ರಾರಂಭವಾದ ಈ ಶಾಲೆಯಲ್ಲಿ ಇಂದು ಕನ್ನಡಿಗರ ಮಕ್ಕಳ ಜೊತೆಗೆ ಸಾವಿರಾರು ಹಿಂದಿ ಭಾಷಿಕರ ಮಕ್ಕಳೂ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ಬೋಧಿಸಲಾಗುತ್ತಿದೆ. ಈ ಶಾಲೆಯನ್ನು ಮಾದರಿ ಶಾಲೆಯನ್ನಾಗಿಸಿ ಅತ್ಯುತ್ತಮ ಶಿಕ್ಷಣವನ್ನು ನೀಡುತ್ತಿದ್ದಾರೆ.

ಅಲ್ಲದೇ, ಶಾಲಾ ಪತ್ರಿಕೆಯಾದ "ಅಭಿವ್ಯಕ್ತ" ಮಾಸ ಪತ್ರಿಕೆಯಲ್ಲಿ ಕನ್ನಡ, ಇಂಗ್ಲೀಷ್, ಹಿಂದಿ ಮತ್ತು ಸಂಸ್ಕೃತದ ಬರಹಗಳು ಪ್ರಕಟವಾಗುತ್ತಿವೆ. ಇಲ್ಲಿನ ಮಕ್ಕಳು ಕನ್ನಡದಲ್ಲಿ



ಸ್ವಂತವಾಗಿ ರಚಿಸಿದ ಕವನಗಳು ಮತ್ತಿತರೆ ಬರಹಗಳನ್ನೂ ಪ್ರಕಟಿಸುತ್ತಿದ್ದು, ಅದಕ್ಕೆ ಪ್ರೋತ್ಸಾಹವಾಗಿ ಅಲ್ಲಿನ ಶಿಕ್ಷಕರ ವರ್ಗ ಮತ್ತು ಆಡಳಿತ ಮಂಡಳಿ ಸದಸ್ಯರು ಬೆನ್ನೆಲುಬಾಗಿ ನಿಂತಿದ್ದಾರೆ. ಈ ಕೋವಿಡ್ ಸಂಕಷ್ಟದ ನಡುವೆಯೂ ಶಾಲೆಯ ಮಾಸ ಪತ್ರಿಕೆ ಆನ್‌ಲೈನ್‌ನಲ್ಲಿ ಪ್ರಕಟವಾಗುತ್ತಿರುವುದು ಹೆಗ್ಗಳಿಕೆಯಾಗಿದೆ. ಈ ಶಾಲೆಯ ಶಿಕ್ಷಕ ವರ್ಗದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕನ್ನಡಿಗರೇ ಇರುವುದು ವಿಶೇಷ.

ಭಿವಾಡಿಯಲ್ಲಿ ಕನ್ನಡಿಗರ ಮಕ್ಕಳಿಗೆ ಕನ್ನಡ ಕಲಿಸುವ ಪ್ರಯತ್ನವಾಗಿ, ವಾರಾಂತ್ಯದ ಕನ್ನಡ ತರಗತಿಗಳನ್ನು ಅಲ್ಲಿನ ಹಿರಿಯರು ಯೋಜಿಸಿದ್ದರು. ಹೀಗೆ ಪ್ರಾರಂಭಿಸಿದ್ದ ಕನ್ನಡ ಕಲಿಕಾ ಕೇಂದ್ರದ ಚಟುವಟಿಕೆ ಕರೋನಾ ಕಾಟದಿಂದಾಗಿ ಪ್ರಾರಂಭವಾದಲ್ಲೇ ನಿಂತು ಹೋದ ವಿಷಯ ತಿಳಿದ ನಾವು ಅಲ್ಲಿನ ಕನ್ನಡಿಗರ ಮಕ್ಕಳಿಗೆ ಕನ್ನಡ ಕಲಿಕೆಯನ್ನು ಆನ್‌ಲೈನ್ ಮೂಲಕ ಮುಂದುವರೆಸುವ ಬಗ್ಗೆ ನಾನು ಮತ್ತು ನನ್ನ ಪತಿ ತೀರ್ಮಾನಿಸಿಕೊಂಡು ಕಾರ್ಯಕ್ಕಿಳಿದೆವು.

ನಂತರ ಉತ್ಸಾಹದಿಂದ ಪ್ರತೀ ಭಾನುವಾರ ಒಂದೂವರೆ ಗಂಟೆಗಳ ಕಾಲ ಗೂಗಲ್ ಮೀಟ್ ಮೂಲಕ ಆನ್‌ಲೈನ್‌ನಲ್ಲಿ ಮಕ್ಕಳಿಗೆ ಕನ್ನಡ ಕಲಿಕಾ ತರಗತಿಗಳನ್ನು ಪ್ರಾರಂಭಿಸಿದೆವು. ಮಕ್ಕಳೂ ಕೂಡಾ ಪ್ರತಿ ತರಗತಿಯಲ್ಲಿ ಉತ್ಸಾಹದಿಂದ ಭಾಗವಹಿಸುವ ಮೂಲಕ ನಾವು ಇನ್ನೂ ಹೆಚ್ಚಿನ ಆಸಕ್ತಿಯಿಂದ ಕನ್ನಡ ಕಲಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಿದರು.

ನಾವಿಬ್ಬರೂ ಸೇರಿ ಮಕ್ಕಳಿಗೆ ಪ್ರತೀ ವಾರ ನಮ್ಮದೇ ಆದ ಪಠ್ಯವನ್ನು ತಯಾರು ಮಾಡಿದ ನಂತರ ಅದನ್ನು ಪಿ.ಪಿ.ಟಿ.ಯಲ್ಲಿ ಆಕರ್ಷಕವಾಗಿ ರೂಪಿಸಿ ವಿನೂತನ ರೀತಿಯಲ್ಲಿ ಮಾರ್ಪಡಿಸಿ ಮಕ್ಕಳು ಖುಷಿಯಿಂದ ಕನ್ನಡ ಪಾಠಗಳನ್ನು ಕಲಿಯುವಂತೆ ಮಾಡಿದೆವು. ಹೊಸ ವಿಧಾನದಲ್ಲಿ ಕಲಿಸುವ ನಮ್ಮ ತರಗತಿಗಳಿಗಾಗಿ ಮಕ್ಕಳು ಅತ್ಯುತ್ಸಾಹದಿಂದ ಭಾಗವಹಿತ್ತಿದ್ದರು.

ಇಲ್ಲಿ ಐದು ವರ್ಷದ ಮಗುವಿನಿಂದ ಹಿಡಿದು ಹದಿಮೂರು ವರ್ಷದ ಮಕ್ಕಳೂ ಕನ್ನಡ ಕಲಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಈಗ ಮಕ್ಕಳು ಅಕ್ಷರಗಳನ್ನು ಕೂಡಿಸಿಕೊಂಡು ಓದುವ ಹಂತ ತಲಪಿರುವುದು ನಮಗೆ ಅತೀವ ಸಂತಸ ತಂದಿದೆ. ಬೆಂಗಳೂರಿನಿಂದ ಮಕ್ಕಳಿಗಾಗಿ ಕನ್ನಡದ ಕಿರುಪುಸ್ತಕಗಳನ್ನು ಪೋಸ್ಟ್ ಮೂಲಕ ತರಿಸಿ ಪ್ರತಿಯೊಂದು ಮಗುವಿಗೂ ಹಂಚಿ ಓದುವಂತೆ ಪ್ರೇರೇಪಿಸುತ್ತಿದ್ದೇವೆ. ಭಿವಾಡಿ ಕನ್ನಡ ಕಲಿಕಾ ಕೇಂದ್ರಕ್ಕೆ ಬೆನ್ನುಲುಬಾಗಿ ನಿಂತ ಗೋಪಾಲಕೃಷ್ಣ ಭಟ್, ನವೀನ್ ಜೆ.ಎಚ್., ಈಶ್ವರಲಿಂಗ ಅರೇರ, ಮತ್ತು ಎಲ್ಲಾ ಪೋಷಕರುಗಳಿಗೆ ಧನ್ಯವಾದ ಹೇಳಲೇ ಬೇಕು.

ಹೊರನಾಡ ಕನ್ನಡದ ಮಕ್ಕಳಿಗೆ ಕನ್ನಡ ಕಲಿಸುವ ಮೂಲಕ ಸಣ್ಣದೊಂದು ಕನ್ನಡ ಸೇವೆ ಮಾಡುವ ಅವಕಾಶ ಇಲ್ಲಿ ನಮಗೆ ದೊರಕ್ಕಿದ್ದು ನಮ್ಮ ಭಾಗ್ಯವೇ ಸರಿ ಎನ್ನುವ ಸಾರ್ಥಕ ಭಾವ ನಮ್ಮದು.

"ಎಲ್ಲಾದರೂ ಇರು, ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು" ಎನ್ನುವ ಕವಿವಾಣಿಯಂತೆ ಎಲ್ಲರೂ ನಮ್ಮ ಶ್ರೀಮಂತ ಕನ್ನಡವನ್ನು ಬಳಸುತ್ತಾ ಬೆಳೆಸೋಣ ಬನ್ನಿ. ಎಷ್ಟು ಭಾಷೆ ಬೇಕಾದರೂ ಕಲಿಯಿರಿ ಆದರೆ ಕಸ್ತೂರಿ ಕನ್ನಡವನ್ನು ಎಂದೂ ಮರೆಯದಿರಿ.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ, ಉಪಾಧ್ಯಕ್ಷ ಡಾ. ಅವನೀಂದ್ರನಾಥ ರಾವ್ ಮತ್ತು ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್, ಹಾಗೂ ಎಲ್ಲಾ ಪದಾಧಿಕಾರಿಗಳಿಗೆ ವಂದನೆಗಳು.

***ಕೆ.ಸಿ. ರತ್ನಶ್ರೀ ಶ್ರೀಧರ್***

ಗುರುಗ್ರಾಮ

# ಬೆಡ್ ಕಾಫಿ

ನಾನು ಚಿಕ್ಕವಳಿದ್ದಾಗ ನನ್ನ ಸೋದರ ಮಾವಂದಿರು ಬೊಂಬಾಯಿ(ಮುಂಬಯಿ) ಕಲ್ಕತ್ತಾ (ಕೋಲ್ಕತಾ)ದಲ್ಲಿ ಕೆಲಸ ಮಾಡುತ್ತಿದ್ದವರು ನಮ್ಮನ್ನೆಲ್ಲಾ ಆಗಾಗ್ಗೆ ನೋಡಲು (ನಾವಾಗ ಬೀರೂರಿನಲ್ಲಿದ್ದೆವು) ಬರುತ್ತಿದ್ದರು. ಅವರು ಮೂರು ದಿವಸ ಕಲ್ಲಿದ್ದಿಲಿನ ಇಂಜಿನ್ ಲೋಹ ಪಥಗಾಮಿನಿಯಲ್ಲಿ ಬರುತ್ತಾರೆಂದರೆ ನನಗೆ ಅವರು ಸ್ವರ್ಗದಿಂದ ಪುಷ್ಪಕವಿಮಾನದಲ್ಲಿ ಬಂದಷ್ಟು ಅಚ್ಚರಿ, ಸಂತೋಷ! ಅವರು ಬಂದಾಗ ನಮ್ಮ ತಾಯಿ ತಂದೆಯೊಡನೆ “ಬೆಡ್‌ಕಾಫಿ” ಅಂತ ಏನೇನೋ ವಿಷಯ ಹೇಳುತ್ತಿದ್ದರು. ನಾನು ಬ್ರೆಡ್-ಕಾಫಿ ಎಂದು ಅರ್ಥ ಮಾಡಿಕೊಳ್ಳುತ್ತಿದ್ದೆ. ಹಾಗೆಂದರೇನೆಂದು ತಿಳಿಯಲು ಎಷ್ಟೋ ವರುಷಗಳವರೆಗೆ ಆಗಲೇ ಇಲ್ಲ.

ಅಂದಹಾಗೆ ಕಾಫಿ ಬಗ್ಗೆ ತಿಳಿಯಲು ನನಗೆ 25 ವರುಷಗಳಾಗುವವರೆಗು ಉತ್ಸುಕತೆಯೂ ಇರಲಿಲ್ಲ. ನಾನು ಕಾಫಿ ಕುಡಿಯುತ್ತಿರಲಿಲ್ಲ. ಏಕೆ ಗೊತ್ತೇ-ನಮ್ಮ ತಂದೆ ತಾಯಿ ಮನೆಯಲ್ಲಿ ಮಕ್ಕಳೆಲ್ಲಾ ಒಡ್ರಾಗಿ ಹಿಟ್ಟಿನ ಗಂಜಿ ಬೆಳಗ್ಗೆ ಕುಡಿಯಬೇಕಾಗಿತ್ತು. ತಂದೆ ತಾಯಿ, ನಮ್ಮಜ್ಜಿ ಮಾತ್ರ ಕಾಫಿ ದಿನದಲ್ಲಿ 3-4 ಬಾರಿ ಕುಡಿಯುತ್ತಿದ್ದರು. ನಮ್ಮ ತಂದೆ ಚಿಕ್ಕಮಂಗಳೂರಿನವರು!

ಒಂದು ಬಾರಿ ನನ್ನ ಚಿಕ್ಕ ತಮ್ಮ ಎಳೇ ಕೂಸು ತೊಟ್ಟಿಲಲ್ಲಿ ಮಲಗಿಸುತ್ತಿದ್ದೆವು. ನನಗೆ ಆಗ 9 ವರುಷ. ದಿನಾ ಬೆಳಗ್ಗೆ ನಮ್ಮಮ್ಮ ಕಾಫಿ ಮಾಡಿ-ಗಂಜಿ ಮಾಡಿಕೊಂಡು ಎರಡು ಡಬರಿಯಲ್ಲಿ ಬಿಸಿಬಿಸಿಯಾಗಿ ತಂದು ಹಜಾರದಲ್ಲಿ ತೊಟ್ಟಿಲು ಕಟ್ಟಿದ ಜಾಗದಲ್ಲಿ ಎಲ್ಲರೂ ಕುಳಿತು ಕುಡಿಯುವ ರೂಢಿ ಇತ್ತು. ಒಂದು ದಿವಸ ಹಾಗೇ ಎಲ್ಲರೂ ಕುಳಿತಾಗ ಎಲ್ಲರು ಏನೇನೋ ಮಾತಾಡಿಕೊಂಡು ಲೋಟ ಹಿಡಿದು ಕುಳಿತಿದ್ದೆವು. ಇದ್ದಕ್ಕಿದ್ದಂತೆ ಕಾಫಿ ಡಬರಿಯಲ್ಲಿ ಕಾಫಿ ಮೇಲಕ್ಕೇರಲು ಶುರುವಾಯಿತು. ಇದೇನಪ್ಪ- ಏನು ಪವಾಡ ಇದು ಎಂದು ನಮ್ಮಮ್ಮ ನೋಡಿದರೆ ನಮ್ಮ ತಮ್ಮ ಕಿಲಕಿಲ ನಗುತ್ತಾ, ಆರಾಮವಾಗಿ ಉಚ್ಚೆ ಚಿಲುಮೆ ಚಿಮ್ಮಿಸುತ್ತಿದ್ದ. ಅದು ನೇರವಾಗಿ ಕಾಫಿ ಡಬರಿಗೆ ಬೀಳುತ್ತಿತ್ತು (ಊಹಿಸಿಕೊಳ್ಳಿ) ಅಬ್ಬಾ ಎಂತಹ ವಿನೋದ! ಅದ್ಭುತ-ಅನುಭವದ ಮೋಜು!

ಅಂದಹಾಗೆ ನಾನು ‘ಬೆಡ್ ಕಾಫಿ’ ಬಗ್ಗೆ ಹೇಳುತ್ತಿದ್ದೆ ಅಲ್ಲವೇ. ನಮ್ಮ ತಾಯಿಯ ಮನೆಯಲ್ಲಿ ‘ಬೆಡ್ ಕಾಫಿ’ ನೋಡಲಾಗಲೀ, ಕುಡಿಯಲಾಗಲಿ ಸಾಧ್ಯವೇ ಇರಲಿಲ್ಲ. ನಾನು ಹದಿನೆಂಟುವರೆ ವಯಸ್ಸಿಗೆ ಮದುವೆ ಆಗಿ ನಮ್ಮತ್ತೆ ಮಾವನ ಮನೆಗೆ ಬನಾರಸ್‌ಗೆ ಬಂದೆ. ಅವರುಗಳು ಬಹಳ ಸಂಪ್ರದಾಯಸ್ಥರು. ಅಲ್ಲದೇ ನನ್ನ ಮಾವನವರು ಬಹಳ ಕಟ್ಟು-ನಿಟ್ಟು-ಸಿಟ್ಟಿನ ಮನುಷ್ಯರು. ಅವರಿಗೆ ಕಾಫಿ ಮೇಲೆ ಅಸಾಧ್ಯ ವೈರತ್ವ. ಆದರೆ ನಮ್ಮತ್ತೆಯವರಿಗೆ ಕಾಫಿ ಚಟ. ಕರ್ನಾಟಕಕ್ಕೆ ಹೋದಾಗಲೆಲ್ಲಾ ಒಳ್ಳೆ ಕಾಫಿ ಬೀಜ ತಂದು ಮನೆಯಲ್ಲಿ ‘ಕರಾವ್’ ಇದ್ದಿದ್ದರಿಂದ ಮೊದಲನೆ ದರ್ಜೆ ಕಾಫಿ ನೇವೇದ್ಯದ ತೀರ್ಥ ಕುಡಿಸಿ ಚಟ ಏರಿಸಿದ್ದರು.

ಆದ್ದರಿಂದ ಅಲ್ಲೂ ಬೆಡ್ ಕಾಫಿಯ ಶಿಸ್ತು ಇರಲಿಲ್ಲ. ನಮ್ಮ ಯಜಮಾನರಿಗೆ ಎಲ್ಲಾದರೂ ಕಾಫಿ ಎಂಬ ಶಬ್ದ ಕೇಳಿಬಿಟ್ಟರೆ ರಾತ್ರಿಯಾಗಲಿ- ಬೆಳಗಾಗಲಿ ಚಟ್ಟನೆದ್ದು ಕುಡಿಯಲು ತವಕಿಸುತ್ತಿದ್ದರು. ಅಬ್ಬಾ-ಏನು ಚಟ-ಅಡಿಕ್ಷನ್! ಇದೆಲ್ಲಾ ಕಣ್ಣು-ಮುಚ್ಚಾಲೆ ಆಟವಾಗಿತ್ತು. ಮಾವನವರ ಭಯದಿಂದ!

ನಂತರ 1969ರಲ್ಲಿ ನಾವು ರೋಟಿ ಕಪಡಾ ಮಖಾನ್‌ಗೋಸ್ಕರ ಕೆಲಸ ಹುಡುಕಿಕೊಂಡು ರಾಷ್ಟ್ರದ ರಾಜಧಾನಿಯಲ್ಲಿ ನಮ್ಮ ವಿದ್ಯಾಬಲದಿಂದ ಡೆಲ್ಲಿ ವಿಶ್ವವಿದ್ಯಾಲಯ ಮತ್ತು ಜವಾಹರಲಾಲ್ ವಿಶ್ವವಿದ್ಯಾಲಯದಲ್ಲಿ ಕೆಲಸ ಪಡೆದು ನೆಲಸಿ ನಮ್ಮದೇ ಯಜಮಾನಿಕೆಯಲ್ಲಿ ಕಾಫಿ ರಿಚ್ಯುಯಲ್ಸ್ ಶುರು ಮಾಡಿಕೊಳ್ಳಬೇಕೆಂದರೂ ನೌಕರಿ, ಮಕ್ಕಳು, ಹಿರಿಯರು ಜೊತೆಗೆ ನಾಯಿಗಳು ಇವೆಲ್ಲಾ ‘ಬೆಡ್ ಕಾಫಿ’ಗೆ ಅಡೆತಡೆಗಳಾಗಿ ಬೆಳಗ್ಗೆ 5ಗಂಟೆಯಿಂದ ರಾತ್ರಿ ಹತ್ತರವರೆಗೆ ತರಾತುರಿಯಾಗಿ ಬಿಟ್ಟಿತು. ಅಂದಮೇಲೆ ‘ಬೆಡ್‌ಕಾಫಿ’ ಹೇಗೆ ಸಾಧ್ಯ?

ಆದರೂ ನಮ್ಮ ಯಜಮಾನರಿಗೆ ಒಳ್ಳೇ ಕಪ್, ಸಾಸರ್, ಟೀ ಕೋಸಿ ಹೊಸ ಹೊಸ ತರಹದ ಇರುಸರಿಕೆ ಎಲ್ಲಾ ಸೇರಿ ಅನೇಕ ತರಾವರಿ ಕ್ರೋಕರಿ ಅದೂ ಇದೂ ಎಂದು “ಶೋ ಕೇಸ್” ತುಂಬುತ್ತಿದ್ದರು. ಆದರೆ ಉಪಯೋಗಿಸಲೇ ಆಗಲಿಲ್ಲ.

ಒಂದು ಭಾನುವಾರ ಬಹಳ ಪ್ರಯತ್ನ ಪಟ್ಟು ‘ಬೆಡ್ ಕಾಫಿ’ ಮಾಡಿಕೊಂಡು ಬೆಡ್‌ಮೇಲೆ ಕುಳಿತು ಗಂಡ ಹೆಂಡತಿ ಕುಡಿಯಲು ಪ್ರಯತ್ನ ಮಾಡಿದಾಗ ಪ್ರೀತಿಯ ಸಾಕು ನಾಯಿ ಮಂಚದ ಮೇಲೆ ಹಾರಿ ಕುಳಿತು ಕಾಫಿ ಚೆಲ್ಲಿತು. ಕಪ್ಪು ಒಡೆಯಿತು ನಮ್ಮ ಮುಖ ಕಪ್ಪಿಟ್ಟಿತು.

ಈಗ ನನ್ನ ಪತಿ ಪರಮಾತ್ಮನನ್ನು ಸೇರಿ 30ವರುಷಗಳಾದವು.  ನನ್ನ ಮಕ್ಕಳು ಮೊಮ್ಮಕ್ಕಳು ತನ್ನದೇ ಶೈಲಿಯಲ್ಲಿ ತಮ್ಮ ವಯಸ್ಸಿಗನುಗುಣವಾಗಿ ಶಿಸ್ತುಗಳನ್ನು ಅನುಸರಿಸಿಕೊಂಡಿದ್ದಾರೆ. ನಾನು ಮಾತ್ರ ಘಮ್ಮೆಂದು ಬೆಳಗ್ಗೆ ಕಾಫಿ ಮಾಡಿಕೊಂಡು ನನ್ನದೇ ಸ್ಟೀಲ್ ಕಪ್‌ಗೆ 90ಡಿಗ್ರಿ ಬಿಸಿಕಾಫಿ ಹಾಕಿಕೊಂಡು ಓಲಾಡುತ್ತಾ ನನ್ನ ಹಾಸಿಗೆ ಬಳಿ ಬಂದು ಕಾಫಿ ಕುಡಿಯುತ್ತೇನೆ. ಅಂತೂ ಬೆಡ್ ಕಾಫಿ ಕಡೆಗಾಲಕ್ಕೆ ಅನುವಾಯಿತು. ಎಷ್ಟೋ ಬಾರಿ ಅದಕ್ಕೂ ಅಡ್ಡಿ, ಯಾರೋ ಬಂದು ಬಾಗಿಲಿನ ಘಂಟೆ ಬಾರಿಸುತ್ತಾರೆ. ಬಾಗಿಲನು ತೆಗೆಯಲು ಹೋಗಬೇಕು ಅಂತೂ ಆ ‘ಬೆಡ್ ಕಾಫಿ’ಯ ಸ್ವಾದ ಅನುಭವಿಸಲಾಗೇ ಇಲ್ಲ.



ಅದಕ್ಕೇ ಅನ್ನೋದು ‘ನೆರೆಮನೆಯವರು ಹರಕೆ ಹೊತ್ತರೆ ಇವರು ನೇಣು ಹಾಕಿಕೊಂಡರು’ ಎಂದಾಗಲಿ ‘ನವಿಲು ಗರಿಗೆದರಿ ಕುಣಿಯಿತೆಂದರೆ ಕೆಂಬೂತಿ ತನ್ನ ಮೈ ಪರಚಿಕೊಂಡಂತೆ’ ಎಂಬ ಗಾದೆಯಂತೆ. Borrowed Culture ಎಲ್ಲಾ ಸಮಯದಲ್ಲೂ ಎಲ್ಲರಿಗೂ ಹಿತವಲ್ಲ.

“ಭೂಸುರಾಪಾನ ಕಾಫಿ ಕಾಫಿ
ಭೂಲೋಕದಲಿ ಕುಡಿದ ನಾನು ಪಾಪಿ
ಪಾಪಿ”

***ಡಾ. ಅಹಲ್ಯಾ ಚಿಂತಾಮಣಿ***

# ಸ್ನೇಹಜೀವಿ ರವಿ ಬೆಳಗೆರೆ

ಡಿಸೆಂಬರ್ 2020ರ ಅಭಿಮತ ಸಂಚಿಕೆಯನ್ನು ಓದಿ ಮುಗಿಸಿದಾಗ ರವಿ ಬೆಳಗೆರೆಯವರ ನೆನಪು, ಎಲ್ಲವೂ ಮನಸ್ಸಿನೊಳಗೆ ಹರಿದಾಡಿದವು. ಈ ಸಂಚಿಕೆಯು ಆ ಭಾವನೆಗಳನ್ನು ಹೊರಗೆಡಹಿದವು. ಕಾರಣ ಬೆಳಗೆರೆ ನನಗೆ ಪರಿಚಿತರು ಹಾಗೂ ಸ್ನೇಹಿತರು. ಹಾಗೆ ನೋಡಿದರೆ ಬಳ್ಳಾರಿಯವರೆಲ್ಲರೂ ಅವರಿಗೆ ಪರಿಚಿತರೇ ಹಾಗೂ ಸ್ನೇಹಿತರೇ! ನನ್ನ ಮತ್ತು ಅವರ ಪರಿಚಯ, ಸ್ನೇಹ ಗಾಢವಾದುದೇನೂ ಅಲ್ಲ. ಅವರನ್ನು ನಾನು ಮತ್ತು ನನ್ನನ್ನು ಅವರು ಬಲ್ಲೆವು. ಎಲ್ಲಿಯೇ ಕಂಡರೂ ಹೆಸರು ಹಿಡಿದು ಮಾತನಾಡಿಸುತ್ತಿದ್ದರು. ಬಳ್ಳಾರಿಯವರೆಂದರೆ ಅವರಿಗೆ ಅಪಾರ ಅಭಿಮಾನ ಮತ್ತು ಒಲವು ಇತ್ತು.

ಅವರಿಗೆ ಲೇಖನಗಳಲ್ಲಿ ಅಲ್ಲದೇ ರಂಗಭೂಮಿ, ಕಿರುತೆರೆ, ಚಲನಚಿತ್ರ ಮುಂತಾದವುಗಳಲ್ಲಿ ತುಂಬಾ ಆಸಕ್ತಿ ಇತ್ತು. ಅವರಿಗೆ ತೆಲುಗು ಭಾಷೆಯೂ ತುಂಬಾ ಚೆನ್ನಾಗಿ ಬರುತ್ತಿತ್ತು. ಲಲಿತ ಕಲಾ ಸಮಿತಿ, ರವೀಂದ್ರ ಕಲಾ ಸಮಿತಿ, ಕರ್ನಾಟಕ ಕಲಾ ಕುಂಜ ಮೊದಲಾದ ಸಂಘಗಳ ಸಂಸ್ಥೆಗಳ ಪರವಾಗಿ ಬಳ್ಳಾರಿಯಲ್ಲಿ ನಾವು ನಾಟಕಗಳ ರಿಹರ್ಸಲ್ಸ್ ಮಾಡುತ್ತಿರುವಾಗ ತಪ್ಪದೇ ಬಂದು ತುಂಬಾ ಸಮಯದವರೆಗೆ ನೋಡಿ, ಎಲ್ಲರನ್ನೂ ಮಾತನಾಡಿಸಿ "ಚೆನ್ನಾಗಿದೆ"ಎಂದು ಹೇಳ ಹೋಗುತ್ತಿದ್ದರು. ನನಗೆ ಉದ್ಯೋಗ ನಿಮಿತ್ತವಾಗಿ ಮುಂಬಯಿಗೆ ವರ್ಗವಾಗಿ, ನಾನು ಮುಂಬಯಿಯಲ್ಲಿ ವಾಸವಾಗಿದ್ದ ದಿವಸಗಳು. ಒಮ್ಮೆ ಬೆಳಗೆರೆ ಅವರನ್ನು ಮುಂಬಯಿಯ ಕನ್ನಡ ಸಂಘವೊಂದು ಸಂಘದ ಸಮಾರಂಭಕ್ಕೆ ಅಧ್ಯಕರನ್ನಾಗಿ ಆಹ್ವಾನಿಸಿ ಸನ್ಮಾನವನ್ನು ಮಾಡಿದ್ದರು. ಆ ಕಾರ್ಯಕ್ರಮದಲ್ಲಿ ತಮ್ಮ ಬಿಚ್ಚು ನುಡಿಗಳಿಂದ ಮುಂಬಯಿ ಕನ್ನಡಿಗರನ್ನು ಅವರು ರಂಜಿಸಿದ್ದರು. ಅವರು ಯಾವುದೇ ವಿಷಯವನ್ನು ಮುಚ್ಚು ಮರೆಯಿಲ್ಲದೇ ಮಾತನಾಡುತ್ತಿದ್ದರು. ಅದು ಅವರ ವೈಯುಕ್ತಿಕ ವಿಷಯವಾಗಿದ್ದರೂ ಸರಿ. ಅದೊಂದು ವಿಧವಾದ ಎದೆಗಾರಿಕೆ ಅವರದು. ಆ ಸಮಾರಂಭದಲ್ಲಿ ರವಿ ಬೆಳಗೆರೆ ಅವರ ಭಾಷಣಕ್ಕೆ ಕಿಕ್ಕಿರಿದು ಹೋಗಿದ್ದ ಆ ಸಭೆಯು ಚಪ್ಪಾಳೆಗಳು, ನಗುಗಳಿಂದ ಪ್ರತಿಧ್ವನಿಸುತ್ತಿತ್ತು.

ಸಮಾರಂಭ ಮುಗಿದ ನಂತರ ಮಹಡಿಯಿಂದ ಇಳಿದು ಕೆಳಗೆ ಬಂದು ನಿಂತು ಸಿಗರೇಟನ್ನು ಹೊತ್ತಿಸಿ ಸೇದುತ್ತಿದ್ದರು. ನಾನು ಹೋಗಿ 'ನಮಸ್ಕಾರ' ಎಂದೆ. ಅವರು "ಓಹ್, ಏನು ನೀವಿಲ್ಲಿ?" ಎಂದು ಕೇಳಿದರು. ನಾನು ಉದ್ಯೋಗ ಪರವಾಗಿ ಮುಂಬಯಿಯಲ್ಲಿ ಇದ್ದುದು, ಮತ್ತಿತರ ವಿಷಯಗಳನ್ನು ತಿಳಿಸಿದಾಗ ಭುಜದ ಮೇಲೆ ಕೈ ಹಾಕಿ ನಿಂತು ಆತ್ಮೀಯವಾಗಿ ಮಾತನಾಡಿಸಿದ್ದರು. ಸಿಗರೇಟ್ ಹೊಗೆಯಾಡುತ್ತಲೇ ಇತ್ತು.

"ನಾವು ಕೆಲವು ಗೆಳೆಯರು ಬಳ್ಳಾರಿಯಲ್ಲಿ ಕಟ್ಟಿಕೊಂಡಿದ್ದ ರವೀಂದ್ರ ಕಲಾ ಸಮಿತಿಯ ಅಡಿಯಲ್ಲಿ ಬಳ್ಳಾರಿಯಲ್ಲಿ ಪ್ರಮುಖ ಕಾದಂಬರಿ ಲೇಖಕರಾದ ಶ್ರೀ ಕೃಷ್ಣಮೂರ್ತಿ ಪುರಾಣಿಕರನ್ನು ಸನ್ಮಾನಿಸಿದ್ದೆವು. ಅಂದು ಬೆಳಗೆರೆಯವರ ತಾಯಿಯವರು ಬರೆದಿದ್ದ "ಪದರುಗಳು" ಎಂಬ ಕವನ ಸಂಕಲನವನ್ನು ಪುರಾಣಿಕರ ಅಮೃತ ಹಸ್ತಗಳಿಂದ ಬಿಡುಗಡೆ ಗೊಳಿಸಿದ್ದೆವು. ಅದನ್ನು ರವಿ ಬೆಳಗೆರೆಯವರು ಯಾವಾಗಲೂ ಜ್ಞಾಪಿಸಿಕೊಳ್ಳುತ್ತಿದ್ದರು."

ನಾವಿಬ್ಬರೂ ಮಾತನಾಡುತ್ತಿರುವಾಗ ಇಬ್ಬರು ಮೂವರು ಮಹಿಳೆಯರು ಬೆಳಗೆರೆಯವರನ್ನು ಮಾತನಾಡಿಸಿ ತಮ್ಮ ಪರಿಚಯವನ್ನು ತಿಳಿಸಿದರು. ಅವರೊಡನೆ ತುಂಬಾ ಆಪ್ಯಾಯತೆಯಿಂದ ಮಾತನಾಡಿದ್ದರು ಬೆಳಗೆರೆಯವರು.

ಚಲಂ ಎಂಬ ತೆಲುಗು ಸಾಹಿತಿಯನ್ನು ಬೆಳಗೆರೆಯವರು ತುಂಬಾ ಇಷ್ಟಪಟ್ಟಿದ್ದರು. ಅವರ ಪುಸ್ತಕಗಳನ್ನು, ಲೇಖನಗಳನ್ನು, ಕಥೆ, ಕಾದಂಬರಿಗಳನ್ನು ಅಪಾರವಾಗಿ. ಆಳವಾಗಿ ಓದಿಕೊಂಡ ರವಿ ಬೆಳಗೆರೆಯವರು ಚಲಂ ಅವರ ಕಟ್ಟಾ ಅಭಿಮಾನಿಯಾಗಿದ್ದರು. ಅವರನ್ನು ಭೇಟಿಯಾಗಿ, ಅವರನ್ನು ಸಂದರ್ಶಿಸಿ ಖುಷಿ ಪಟ್ಟಿದ್ದರು. ಬೆಳಗೆರೆಯವರು ಆ ತೆಲುಗು ಸಾಹಿತಿಯ ಬಗ್ಗೆ ಬರೆದ 'ಚಲಂ' ಎಂಬ ಕನ್ನಡ ಕೃತಿ ಅಪಾರ ಯಶಸ್ಸು ಕಂಡಿತ್ತು. ಒಬ್ಬ ಬರಹಗಾರನಿಗೆ ಇರಬೇಕಾದ ತುಡಿತವನ್ನು ಈ ಘಟನೆ ಗಟ್ಟಿಗೊಳಿಸುತ್ತದೆ.

ನಾವು ಕೆಲವು ಗೆಳೆಯರು ಬಳ್ಳಾರಿಯಲ್ಲಿ ಕಟ್ಟಿಕೊಂಡಿದ್ದ ರವೀಂದ್ರ ಕಲಾ ಸಮಿತಿಯ ಅಡಿಯಲ್ಲಿ ಬಳ್ಳಾರಿಯಲ್ಲಿ ಪ್ರಮುಖ ಕಾದಂಬರಿ ಲೇಖಕರಾದ ಶ್ರೀ ಕೃಷ್ಣಮೂರ್ತಿ ಪುರಾಣಿಕರನ್ನು ಸನ್ಮಾನಿಸಿದ್ದೆವು. ಅಂದು ಬೆಳಗೆರೆಯವರ ತಾಯಿಯವರು ಬರೆದಿದ್ದ "ಪದರುಗಳು" ಎಂಬ ಕವನ ಸಂಕಲನವನ್ನು ಪುರಾಣಿಕರ ಅಮೃತ ಹಸ್ತಗಳಿಂದ ಬಿಡುಗಡೆ ಗೊಳಿಸಿದ್ದೆವು. ಅದನ್ನು ರವಿ ಬೆಳಗೆರೆಯವರು ಯಾವಾಗಲೂ ಜ್ಞಾಪಿಸಿಕೊಳ್ಳುತ್ತಿದ್ದರು. ಅಲ್ಲದೇ ಪುರಾಣಿಕರ ಸನ್ಮಾನ ಪತ್ರವನ್ನು ಬರೆಯುವುದರಲ್ಲಿ ಅವರು ಅನೇಕ ಸಲಹೆ ಸೂಚನೆಗಳನ್ನು ಕೊಟ್ಟು



ಅದನ್ನು ಸುಂದರಗೊಳಿಸಿದ್ದರು. ಅಂದಿನ ಆ ಕಾರ್ಯಕ್ರಮವನ್ನು, ನಾವು ಪ್ರದರ್ಶಿಸಿದ ಏಕಾಂಕ ನಾಟಕವನ್ನೂ ನೋಡಿ ಸಂತಸ ವ್ಯಕ್ತ ಪಡಿಸಿದ್ದರು.

ನನಗಿಂತಲೂ ಐದಾರು ವರ್ಷಗಳಷ್ಟು ಚಿಕ್ಕವರು ಅವರು. ಆದರೂ ಅವರು ಎಲ್ಲರೊಡನೆ ಕಲೆತು ಬೆರೆತು ಇರುತ್ತಿದ್ದರು. ಬಳ್ಳಾರಿಯ ತಮ್ಮ ಗೆಳೆಯರ ಬಗ್ಗೆ 'ಹಾಯ್ ಬೆಂಗಳೂರು' ಪತ್ರಿಕೆಯಲ್ಲಿ ಆಗಾಗ ಬರೆಯುತ್ತಿದ್ದರು. ಅವರು ನನ್ನ ಹಾಗೂ ಇನ್ನು ಕೆಲವು ಮಿತ್ರರ ಹೆಸರುಗಳನ್ನು ಸಹ ಬರೆದು ಲೇಖನಗಳನ್ನು ಬರೆದಿದ್ದರು. ನಮಗಾರಿಗೂ ಆ ವಿಷಯ ತಿಳಿಯದು. ನಂತರ ತಿಳಿದಾಗ ಬಳ್ಳಾರಿಯ ಮಿತ್ರರೆಲ್ಲರಿಗೂ ಸಂತಸ ಹಾಗೂ ಆಶ್ಚರ್ಯಗಳು. ಹಾಗೆ ಆಗಾಗ ಅವರು ಬಳ್ಳಾರಿಯ ಬಗ್ಗೆ ಬರೆದು ತಮ್ಮ ಊರಿನ ಮೇಲೆ ಅವರಿಗಿರುವ ಅಪಾರ ಪ್ರೀತಿ, ಇಷ್ಟಗಳನ್ನು ವ್ಯಕ್ತ ಪಡಿಸಿದುದು ಉಂಟು. ಅಷ್ಟು ಸ್ನೇಹಜೀವಿಗಳು ಅವರು.

ನಮ್ಮನ್ನು ಅಗಲಿ ಬಹು ಬೇಗನೇ ಅವರು ಹೊರಟುಬಿಟ್ಟರು. ಆದರೆ ಅವರು ಸಾಹಿತ್ಯದ ಅಪಾರ ಕೊಡುಗೆಗಳನ್ನು ನಮಗೆ ಬಿಟ್ಟು ಹೋಗಿದ್ದಾರೆ. ಭಗವಂತನು ಅವರ ಕುಟುಂಬಕ್ಕೆ ಅವರಿಲ್ಲದ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲಿ. ಅವರಿಗೆ ಸದ್ಗತಿ ದೊರೆಯಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಡಿಸೆಂಬರ್ 2020ರ ಅಭಿಮತಕ್ಕೆ ನಾನು ಚಿರಋಣಿ. ಕಾರಣ ಅದು ನನ್ನ ಭಾವನೆಗಳನ್ನು, ಅನಿಸಿಕೆಗಳನ್ನು ಕೆದಕಿತು. 'It is better late than never' ಎಂಬ ಆಂಗ್ಲ ನಾಣ್ಣುಡಿಯಂತೆ ತಡವಾಗಿಯಾದರೂ ಅಗಲಿದ ಅಕ್ಷರ ಬ್ರಹ್ಮನಿಗೆ ಶ್ರದ್ಧಾಂಜಲಿ ಅರ್ಪಿಸುವ ಅವಕಾಶವನ್ನು ಮಾಡಿಕೊಟ್ಟಿದೆ.

ದೆಹಲಿ ಕನ್ನಡ ಸಂಘಕ್ಕೆ ನಾನು ಚಿರ ಋಣಿ.

**ಕೃಷ್ಣಮೂರ್ತಿ ಕಲುಮಂಗಿ**
ಬಳ್ಳಾರಿ

# ಶರಣ ಸಾಹಿತ್ಯವನ್ನು ವಿಶ್ವದಾದ್ಯಂತ ಪ್ರಸರಿಸಲಿ


## ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕ ಉದ್ಘಾಟಿಸಿ ಅಪ್ಪಾರಾವ್ ಅಕ್ಕೋಣಿ

ಶರಣ ಸಾಹಿತ್ಯವನ್ನು ವಿಶ್ವದಾದ್ಯಂತ ಪ್ರಸರಿಸುವ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಗುರಿಯನ್ನು ಸಾಕಾರಗೊಳಿಸುವಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ರಾಯಭಾರಿಯಂತೆ ಆರಂಭವಾದ ಪರಿಷತ್ತಿನ ದೆಹಲಿ ಪ್ರದೇಶ ಘಟಕ ಕಾರ್ಯ ನಿರ್ವಹಿಸಬೇಕೆಂದು ಅದರ ಕೇಂದ್ರ ಅಧ್ಯಕ್ಷ ಅಪ್ಪಾರಾವ್ ಅಕ್ಕೋಣಿ ಅವರು ಆಶಿಸಿದರು. ಅವರು ರಾಷ್ಟ್ರಕವಿ ಕುವೆಂಪು ಜನ್ಮದಿನ ಪ್ರಯುಕ್ತ ದಿನಾಂಕ 29.12.2020 ರಂದು ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕ ಆಯೋಜಿಸಿದ್ದ ಆನ್‌ಲೈನ್ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ವಿದ್ವಾಂಸ ಗೋ. ರು. ಚನ್ನಬಸಪ್ಪ, ಸಂಸದ ಅಣ್ಣಾ ಸಾಹೇಬ್ ಜೊಲ್ಲೆ, ಚಿಂತಕ ಡಾ. ಬಸವರಾಜ್ ಕಲ್ಗುಡಿ, ದೆಹಲಿ ಘಟಕದ ಅಧ್ಯಕ್ಷ ಎನ್.ಪಿ. ಚಂದ್ರಶೇಖರ್ ಉಪಸ್ಥಿತರಿದ್ದರು.

ಜಗದ್ಗುರು ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರಸ್ವಾಮಿಗಳವರ ಕೃಪಾಶೀರ್ವಾದಗಳೊಂದಿಗೆ ಹಾಗೂ ಪೂಜ್ಯರ ಒತ್ತಾಸೆಯಂತೆ ಸ್ಥಾಪನೆಯಾದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಇಂದು ಇಡೀ ಕರ್ನಾಟಕದಾದ್ಯಂತ ಹಾಗೂ ನೆರೆ ರಾಜ್ಯಗಳಲ್ಲೂ ತನ್ನ ಘಟಕಗಳನ್ನು ಹೊಂದಿದೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ತನ್ನ ಪ್ರಾದೇಶಿಕ ಘಟಕವನ್ನು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ತೆರೆಯುವ ಮೂಲಕ ತನ್ನ ಹಲವು ವರ್ಷಗಳ ಕನಸನ್ನು ಚಂದ್ರಶೇಖರ್ ಅವರ ಉತ್ಸಾಹ ಮತ್ತು ಪ್ರಯತ್ನದಿಂದ ನನಸಾಗಿಸಿದ್ದು ಬಹಳ ಸಂತೋಷವಾಗಿದೆ ಎಂದು ಆನ್‌ಲೈನ್ ಉಪನ್ಯಾಸ ಉದ್ಘಾಟಿಸಿ ಶುಭ ಹಾರೈಸಿದರು.

ಖ್ಯಾತ ಚಿಂತಕ, ಬರಹಗಾರ ಡಾ. ಬಸವರಾಜ ಕಲ್ಗುಡಿ ಅವರು "ವಚನ ಸಾಹಿತ್ಯ ಮತ್ತು ವೈಚಾರಿಕತೆ' ವಿಷಯ ಕುರಿತು ಮಾತನಾಡಿ ಕುವೆಂಪುರವರ ಕೃತಿಗಳಲ್ಲಿ ಚಿತ್ರಿತಗೊಂಡಿರುವ ಶೋಷಣೆಗೊಳಗಾದ ಪಾತ್ರಗಳು ಮತ್ತು ಸನ್ನಿವೇಶಗಳನ್ನು ಉಲ್ಲೇಖಿಸುತ್ತಾ ಅಂತಹದೇ ಭಾವಧಾರೆಗಳನ್ನು ಹೊರಹೊಮ್ಮಿಸುವ 12ನೇ ಶತಮಾನದ ಸಾಮಾಜಿಕ ಕ್ರಾಂತಿಯ ಹರಿಕಾರ ಬಸವಣ್ಣನವರ ಹಾಗೂ ಅವರ ಸಮಕಾಲೀನ ವಚನಕಾರರ ವಚನಗಳನ್ನು ವಿಶ್ಲೇಷಿಸುತ್ತಾ ಒಂದು ಗಂಟೆಗೂ ಮೀರಿ ಉಪನ್ಯಾಸ ನೀಡಿದರು.

ಮುಖ್ಯ ಅತಿಥಿ ಚಿಕ್ಕೋಡಿ ಲೋಕಸಭಾ ಸದಸ್ಯ ಮಾನ್ಯ ಅಣ್ಣಾ ಸಾಹೇಬ್ ಜೊಲ್ಲೆ ಅವರು ಮಾತನಾಡಿ ಜಗದ್ಗುರು ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರಸ್ವಾಮಿಗಳವರು ಯಾವ ಉದ್ದೇಶವಿಟ್ಟುಕೊಂಡಿದ್ದರೋ ಆ ಉದ್ದೇಶ ಪರಿಷತ್ತಿನ ದೆಹಲಿ ಪ್ರದೇಶ ಘಟಕದ ಸ್ಥಾಪನೆಯೊಂದಿಗೆ ಸಾಕಾರವಾಗಿದೆ. ಘಟಕ ಹೊರನಾಡಿನ ಕನ್ನಡಿಗರಿಗೆ ಹಾಗೂ ಕನ್ನಡೇತರರಿಗೂ ವಚನ ಸಾಹಿತ್ಯದ ಅರಿವು



ಮೂಡಿಸುತ್ತಾ ಯಶಸ್ಸು ಕಾಣುತ್ತದೆಂಬ ವಿಶ್ವಾಸ ವ್ಯಕ್ತಪಡಿಸಿದರು.

ದೆಹಲಿ ಘಟಕದ ಅಧ್ಯಕ್ಷ ಎನ್.ಪಿ. ಚಂದ್ರಶೇಖರ್ ಅವರು ಮಾತನಾಡಿ 2020ನೇ ವರ್ಷದ ಆರಂಭದಲ್ಲಿ ದೆಹಲಿಯ ರಾಜ್‌ಪಥ್‌ನಲ್ಲಿ ಗಣರಾಜ್ಯೋತ್ಸವದ ದಿನ ವಿಶ್ವದ ಎಲ್ಲ ಸಂಸದೀಯ ವ್ಯವಸ್ಥೆಗಳ ಜನಕ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದ ಸ್ತಬ್ಧಚಿತ್ರ ಪ್ರದರ್ಶನ ದೇಶದ ಗಮನವನ್ನು ಮಾತ್ರವಲ್ಲ, ಜಗತ್ತಿನ ಗಮನವನ್ನು ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಸಮಾಜೋ ಧಾರ್ಮಿಕ ಆಂದೋಲನದ ಕಡೆಗೆ ಸೆಳೆಯುವಂತೆ ಮಾಡಿದರೆ, ಇದೇ ವರ್ಷ ದೆಹಲಿಯಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ತನ್ನ ಘಟಕ ಸ್ಥಾಪಿಸಿರುವುದು ಗಮನಾರ್ಹವಾದುದು. ಅದು ಕೇಂದ್ರ ಪರಿಷತ್ತಿನ ಆಶಯಗಳನ್ನು ಮತ್ತು ಧ್ಯೇಯೊದ್ದೇಶಗಳನ್ನು ಈಡೇರಿಸುವಲ್ಲಿ ಎಲ್ಲ ಸದಸ್ಯರ ನೆರವಿನೊಂದಿಗೆ ಶ್ರಮಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯವಾದಿ ಡಾ. ಶರತ್ ಜವಳಿ, ಜನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ, ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥಾನದ ನಿರ್ದೇಶಕ ಡಾ. ಈಶ್ವರ ಬಸವಾರೆಡ್ಡಿ, ದೆಹಲಿ ಕನ್ನಡ ವಿದ್ಯಾಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಜೆ.ಎಸ್.ಎಸ್. (ನೋಯ್ಡಾ) ಸಂಸ್ಥೆಯ ಮನೋಜ್ ಕುಮಾರ್, ಲಂಡನ್‌ನ ಥೇಮ್ಸ್ ನದಿ ದಡದಲ್ಲಿ ಬಸವಣ್ಣನವರ ಪುತ್ಥಳಿಯನ್ನು ಪ್ರತಿಷ್ಠಾಪಿಸಿದ ಖ್ಯಾತಿಯ ಡಾ. ನೀರಜ್ ಪಾಟೀಲ್, ಐ.ಎ.ಎಸ್. ಅಧಿಕಾರಿ ಕೆಂಪಹೊನ್ನಯ್ಯ ಸೇರಿದಂತೆ ಇನ್ನೂ ಹಲವಾರು ಗಣ್ಯರು ಕಾರ್ಯಕ್ರಮದ ಕುರಿತು ಶ್ಲಾಘಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಹಾಗೂ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ್ ಅವರು ನೂತನ ಘಟಕಕ್ಕೆ ಸಂಘವು ಎಲ್ಲ ರೀತಿಯ ಸಹಕಾರ ಮತ್ತು ಪ್ರೋತ್ಸಾಹಗಳನ್ನು ನೀಡುತ್ತದೆಂದು ಹೇಳಿದರು.

ದೆಹಲಿ ಘಟಕದ ಸದಸ್ಯರ ಮಕ್ಕಳು ಮತ್ತು ಮಹಿಳೆಯರು ವಚನಗಾಯನ ಹಾಗೂ ಕವನ ವಾಚನದ ಮೂಲಕ ಗಮನ ಸೆಳೆದು ಕಾರ್ಯಕ್ರಮಕ್ಕೆ ಮೆರುಗು ನೀಡಿದರು. ಸಂಚಿತಾ ನೀಲೂರೆ, ಮಾ. ಓಂಕಾರೇಶ್ವರ ಸಿ., ಕು. ನಂದಿತ ಉಬಾಲೆ, ಕು. ಆರಾಧ್ಯ ಪಾಟೀಲ್ ವಚನಗಳನ್ನು ಹಾಡಿದರೆ, ಕು. ಅಭಿಷೇಕ್ ಎಸ್. ಕು. ಧನ್ವಿನ್ ಹೆಚ್. ಹಾಗೂ ಶ್ರೀಮತಿ ಗೀತಾ ನಂಜುಂಡಸ್ವಾಮಿ ಅವರು ಕ್ರಮವಾಗಿ ಕುವೆಂಪು ಅವರ 'ಶ್ರೀ ಬಸವೇಶ್ವರಾ', ವಿಶ್ವಮಾನವ ಸಂದೇಶ ಹಾಗೂ ಅನಿಕೇತನ ಪದ್ಯವನ್ನು ವಾಚಿಸಿದರು.

ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯ ಖ್ಯಾತ ಗಾಯಕ ಪ್ರಕಾಶ್ ಜೈನ್ ಮತ್ತು ಸಂಗಡಿಗರು ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ ಶಿವ ಶಿವಾ ಎಂಬ ಬಸವಣ್ಣನವರ ವಚನ ಗಾಯನದೊಂದಿಗೆ ಶುಭಾರಂಭಗೊಳಿಸಿದರು. ಪ್ರಧಾನ ಕಾರ್ಯದರ್ಶಿ ಡಾ. ಗುರುರಾಜ ಸಂಗೊಂದಿಮಠ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿಯ ಸದಸ್ಯ ಶಿವಣ್ಣ ಎಲ್. ವಂದಿಸಿದರು. ಅತಿಥಿ ಗಣ್ಯರ ಪರಿಚಯವನ್ನು ಕಾರ್ಯಕಾರಿ ಸಮಿತಿಯ ಸದಸ್ಯ ರಾಜಕುಮಾರ ನೀಲೂರ, ಈಶ್ವರಲಿಂಗ ಅರೇರಾ ಹಾಗೂ ಕದಳಿ ಮಹಿಳಾ ವೇದಿಕೆ ಸಂಚಾಲಕಿ ಶ್ರೀಮತಿ ಜಯಶ್ರೀ ಬಸವರಾಜು ಮಾಡಿದರು. ಅರವಿಂದ ಬಿಜ್ಜೆ ಕಾರ್ಯಕ್ರಮ ನಿರೂಪಿಸಿದರು.

ದೆಹಲಿ ಘಟಕದ ಉಪಾಧ್ಯಕ್ಷ ಪ್ರಭು ಶೆಟ್ಟಿ ಪಾಟೀಲ್, ಖಜಾಂಚಿ ಶಿವಪ್ಪ ಎಂ. ಕಾರ್ಯದರ್ಶಿ ಕೆ.ಎಸ್. ಮೂರ್ತಿ, ಸದಸ್ಯ ಉಮೇಶ್ ಆರ್., ಕದಳಿವೇದಿಕೆ ಉಪಸಂಚಾಲಕಿ ಅರುಣಾ ವೀರಭದ್ರಪ್ಪ ಹಾಗೂ ಭಾಗವಹಿಸಿದ್ದ ಎಲ್ಲರೂ ಘಟಕದ ಮೊದಲ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಲು ನೆರವಾದರು.

***ಮಹದೇವಪ್ರಸಾದ್***

# ಡಾ. ಬಿ.ಆರ್. ಅಂಬೇಡ್ಕರ್ ಅವರ ಪುಣ್ಯಸ್ಮರಣೆ




ಸಮಾನತೆಯ ಹರಿಕಾರ, ವಿಶ್ವ ಕಂಡ ಮಹಾನ್ ಚೇತನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನವಾದ ಡಿಸೆಂಬರ್ 6 ರಂದು ದೆಹಲಿಯ ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಫೌಂಡೇಷನ್ ಪುಣ್ಯ ಸ್ಮರಣೆಯನ್ನು ಆಚರಿಸಿತು.

ಈ ಪುಣ್ಯ ಸ್ಮರಣೆಯಲ್ಲಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಎಂ.ಎಸ್. ಶಶಿಕುಮಾರ್, ಹಿರಿಯ ಕನ್ನಡಿಗ ವಿ.ವಿ. ಬಿರಾದಾರ ಮೊದಲಾದವರು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನಗಳನ್ನು ಸಲ್ಲಿಸಿ ಅವರ ಕೊಡುಗೆಗಳನ್ನು ಸ್ಮರಿಸಿದರು.

ಡಾ. ಅವನಿಂದ್ರನಾಥ್ ರಾವ್ ಅವರು ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರು ಶ್ರೇಷ್ಠ ಸಂವಿಧಾನವನ್ನು ರಚಿಸಿ ದೇಶಕ್ಕೆ ಮಾರ್ಗದರ್ಶನವನ್ನು ಮಾಡಿದ್ದಾರೆ. ದೇಶದ ರಾಷ್ಟ್ರಪಿತನಷ್ಟೇ ಗೌರವ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ. ಇಂತಹ ಪುಣ್ಯ ಸ್ಮರಣೆಯಲ್ಲಿ ಭಾಗವಹಿಸುವುದು ಸ್ಮರಣೀಯ ಅನುಭವ ಎಂದು ಹೇಳಿದರು.

ಸಿ.ಎಂ. ನಾಗರಾಜ ಅವರು ಮಾತನಾಡಿ, ಡಾ. ಅಂಬೇಡ್ಕರ್ ಅವರು ಮತ್ತೆ ಹುಟ್ಟಿ ಬರಲಿ, ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯುವುದರ ಮೂಲಕ ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಬೇಕಿದೆ ಎಂದು ಹೇಳಿದರು. ಅವರ ಉದಾತ್ತ ವಿಚಾರಗಳನ್ನು ಪಾಲಿಸುವುದರ ಮೂಲಕ ಉತ್ತಮ ಸಮಾಜ ನಿರ್ಮಾಣದ ನಿಟ್ಟಿನಲ್ಲಿ ಚಿಂತಿಸಬೇಕಾಗಿದೆ ಎಂದು ಅವರು ತಿಳಿಸಿದರು.

ಡಾ. ಎಂ.ಎಸ್. ಶಶಿಕುಮಾರ್ ಅವರು ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ಆದರ್ಶಗಳನ್ನು ಪಾಲಿಸುವುದು ಎಂದರೆ, ಅಶಕ್ತರಿಗೆ ಸಹಾಯ ಮಾಡುವುದು. ಎಲ್ಲರೂ ಶಿಕ್ಷಣವನ್ನು ಪಡೆದು ಪ್ರಜ್ಞಾವಂತರಾದರೆ ಸಮಾಜದಲ್ಲಿ ಸುಧಾರಣೆ ತರಬಹುದಾಗಿದೆ ಎಂದರು. ನಾವು ಸುಶಿಕ್ಷಿತ ಸಮಾಜ ನಿರ್ಮಾಣದ ಗುರಿಯಡೆಗೆ ಸಾಗಬೇಕಿದೆ ಎಂದು ತಿಳಿಸಿದರು. ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಫೌಂಡೇಷನ್ ಸಂಸ್ಥೆಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಅವರು ಹೇಳಿದರು.

ವಿ.ವಿ. ಬಿರಾದಾರ ಅವರು ಮಾತನಾಡಿ, ಬುದ್ಧ, ಬಸವ, ಅಂಬೇಡ್ಕರ್ ಇವರು ಮಹಾನ್ ವ್ಯಕ್ತಿಗಳಾಗಿದ್ದಾರೆ. ಇಂತಹ ದಾರ್ಶನಿಕರ ಉದಾತ್ತ ವಿಚಾರಗಳನ್ನು ನಾವೆಲ್ಲರೂ ಪಾಲಿಸಬೇಕಿದೆ ಎಂದು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಅನಿವಾರ್ಯ ಕಾರಣಗಳಿಂದ ಕಾರ್ಯಕ್ರಮಕ್ಕೆ ಹಾಜರಾಗಲು ಸಾಧ್ಯವಾಗಲಿಲ್ಲ. ಅವರು ದೂರವಾಣಿ ಸಂದೇಶದ ಮೂಲಕ ಕಾರ್ಯಕ್ರಮಕ್ಕೆ ಶುಭಾಶಯ ಕೋರಿದರು. ಅಂಬೇಡ್ಕರವರ ಪರಿನಿರ್ವಾಣದ ದಿನದಂದು ಅವರನ್ನು ನೆನಪು ಮಾಡಿಕೊಳ್ಳುವುದು ನಮ್ಮ ಕರ್ತವ್ಯ ಎಂದರಲ್ಲದೇ, ದೆಹಲಿ ಕರ್ನಾಟಕ ಸಂಘವು ಇಂತಹ ಕಾರ್ಯಕ್ರಮಕ್ಕೆ ಯಾವಾಗಲೂ ಕೈಜೋಡಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಫೌಂಡೇಷನ್‌ನ ತ್ಯಾಗೇಶ್ ಮೂರ್ತಿ, ಸಿ. ನಟರಾಜ್, ಎಸ್. ರಮೇಶ್, ಎಂ.ಆರ್. ಸತೀಶ್ ಅವರು ಉಪಸ್ಥಿತರಿದ್ದು ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸಿದರು.

***ಎಸ್. ಕುಮಾರ್***

# ಟೊಂಗೆಯೆಂಬ ಪಾತ್ರಧಾರಿಗಳಿಂದ ನಾಟಕ ವೃಕ್ಷ ಮೈದಾಳುತ್ತದೆ

## - ಚಿದಾನಂದ ಬಡಿಗೇರ

ಸಾಂಘಿಕ ಶಿಸ್ತು ಮೈಗೂಡಿಸಿಕೊಂಡು, ಗುರಿ ಮತ್ತು ಪ್ರಯತ್ನದೆಡೆಗೆ ಸಾಗಬೇಕು. ಹಾಡು, ಅಭಿನಯ, ವಾಚಿಕ ಮನನ ಮಾಡಿಕೊಳ್ಳಬೇಕು. ಸಂಗೀತವು ರಂಗಭೂಮಿಯ ತಾಯಿ ಇದ್ದ ಹಾಗೆ, ನಾಟಕವು ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಮಾಧ್ಯಮ. ಸಂಗೀತ ಮುಕುಟಮಣಿ ಇದ್ದ ಹಾಗೆ, ಸಂಗೀತಕ್ಕೆ ಎಲ್ಲಾ ಕ್ಷೇತ್ರದಲ್ಲೂ ಪ್ರಾಧಾನ್ಯತೆ ಇದೆ. ಮಾತು ಕೂಡ ಸ್ವರ, ಸಂಗೀತ ಸ್ವರದೊಂದಿಗೆ ಭಾವಾಭಿನಯ ಮನಮುಟ್ಟುತ್ತದೆ. ಟೊಂಗೆ ಎಂಬ ಪಾತ್ರಧಾರಿಗಳಿಂದ 'ನಾಟಕ'ಎಂಬ 'ವೃಕ್ಷ' ಮೈದಾಡುತ್ತದೆ ಎಂದು ಬಾಗಲಕೋಟಿ ಜಿಲ್ಲೆಯ ಕೂಡಲ ಸಂಗಮದ ಹಿರಿಯ ರಂಗಕರ್ಮಿ, ನಾಟಕ ಮಾಸ್ತರ ಎಂದೇ ಚಿರಪರಿಚಿತರೂ ಆದ ಚಿದಾನಂದ ಮ. ಬಡಿಗೇರ ಅವರು ಹೇಳಿದರು. ದಿನಾಂಕ 13.12.2020 ರಂದು ಝೂಮ್ ಮೀಟಿಂಗ್ ಮೂಲಕ 'ದಿನಕರ'ವು ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಅವರು ಮಾತನಾಡಿ, ಕಳೆದ ಆರು ದಶಕಗಳ ರಂಗಭೂಮಿಯ ವೃತ್ತಿ ಬದುಕಿನ ತಮ್ಮ ಅನುಭವವನ್ನು ಈ ಮೂಲಕ ಹಂಚಿಕೊಂಡರು.

ಸಂಗೀತ ಹಾಗೂ ಸಂಭಾಷಣೆ ಪ್ರೇಕ್ಷಕನ ಕರುಣಾಭಾವಕ್ಕೆ ತಲುಪಬೇಕು. ನಾಟಕದಲ್ಲಿ ಸಂಗೀತ ಸಂಭಾಷಣೆಯ ಹಿನ್ನೆಲೆ ಇದ್ದಾಗ ಅದಕ್ಕೊಂದು ಮೆರೆಗು ಬರುತ್ತದೆ. ಅಭಿನಯಕಾರರಿಗೆ ಸಂಗೀತ ಪೂರಕವಾಗಿ ಸೇರಿದಾಗ ಅತ್ಯುತ್ತಮವಾಗಿ ಅಭಿನಯಿಸಲು ಸಹಾಯಕಾರಿ ಎಂದರು.

ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳುವುದರ ಜೊತೆಗೆ ಅವುಗಳನ್ನು ಅಳವಡಿಸಿಕೊಳ್ಳುವುದು ತರ್ಕವೇ ಸರಿ. ಇಂದಿಗೂ ರಂಗಭೂಮಿಯ ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳಿಗೆ ಶಾಸ್ತ್ರೀಯ ಬದ್ಧ ಸಂಗೀತ ಬಳಕೆಯಲ್ಲಿದೆ ಎಂದರು. ಸಂಗೀತ ಕೇಳುಗನ ಇಚ್ಛೆಯಾನುಸಾರ ಆಯಾ ಕಾಲಕ್ಕೆ ತಕ್ಕಂತೆ ಬಳಕೆಯಾಗುತ್ತಿದೆ ಎಂದರು. ಸಂಗೀತದಲ್ಲಿ ಅದ್ಭುತವಾದ ಶಕ್ತಿ ಇದೆ. ಸಂಗೀತ ಕೇಳುಗ ನಿರೋಗಿಯಾಗಬಲ್ಲ ಎಂದರು.

ತಾವು ಕಳೆದ ಆರು ದಶಕಗಳ ಕಾಲ ರಂಗಭೂಮಿ ಕ್ಷೇತ್ರದಲ್ಲಿದ್ದು, ಅದು ತಮಗೆ ಎಲ್ಲವನ್ನು ದಯಪಾಲಿಸಿದೆ ಎಂದರು. ರಂಗಭೂಮಿ ತಮಗೆ ಆಯುಷ್ಯ, ಸ್ಥೈರ್ಯ-ಧೈರ್ಯ ಕೊಟ್ಟಿದೆ ಎಂದರು.

81ರ ವಯಸ್ಸಿನಲ್ಲೂ ರಂಗಭೂಮಿ ಸಂಗೀತ ಕುರಿತಾಗಿ ದಣಿವರಿಯದೆ ಸುದೀರ್ಘ ಒಂದುವರೆ ಗಂಟೆಗಳ ಕಾಲ ಉಲ್ಲಸಿತರಾಗಿ, ಅಭಿನಯ, ರಂಗಗೀತೆ ಮೂಲಕ ಪ್ರಾತ್ಯಕ್ಷಿಕೆ ನೀಡಿದರು. ದಿನಕರ ತಮಗೆ ಕಿರೀಟ ತೊಡಿಸಿದೆ. ಸಂತೋಷವಾಯಿತು ಎಂದು ಬಣ್ಣಿಸಿದರು.

ತಮ್ಮ ಬಾಲ್ಯವನ್ನು ಮೆಲುಕು ಹಾಕಿದ ಅವರು, ಸಂಗೀತ ಕಲಿಯುವ ಉತ್ಸಾಹವಿತ್ತು, ಕಲಿಯಲು ಗುರು ಬೇಕಾಗಿತ್ತು. ಪ್ರಾಥಮಿಕ ಸಂಗೀತ ಶಿಕ್ಷಣಾಭ್ಯಾಸ ವಾಯಿಲಿನ್ ವಾದಕ ಕಾಳಪ್ಪ ಅವರಿಂದ. ಮನೆಯಿಂದ ಪ್ರೋತ್ಸಾಹ ನೀಡದ ಸಂದರ್ಭ, ಗುರು ಅರಸುತ್ತಾ ನಡೆದು, ಗದುಗಿನ ಪಂಡಿತ ಪುಟ್ಟರಾಜ್ ಅವರ ದಿವ್ಯ ಸನ್ನಿಧಿಯಲ್ಲಿ ಸಂಗೀತಾಭ್ಯಾಸ ಮಾಡಿದೆ. ಗುರು ಕೊಟ್ಟ ಸಂಗೀತ ಪ್ರಸಾದದ ಕೃಪಾಶೀರ್ವಾದವೇ ಶ್ರೀರಕ್ಷೆಯಾಯಿತು ಎಂದರು.



ನಾಟಕ ಮಾಸ್ತರ ಚಿದಾನಂದ ಮ. ಬಡಿಗೇರ

ಅದು 1957ರ ಸಮಯ ತಮ್ಮ ಹುಟ್ಟೂರಿಗೆ ಗದುಗಿನ ಪಂ. ಪುಟ್ಟರಾಜ ಗವಾಯಿಯಗಳ ನಾಟಕ ಕಂಪನಿ ಆಗಮಿಸಿತು. ನೆಲೋಡಿ ನೀಲಕಂಠ ಶಾಸ್ತ್ರೀಗಳು ಆ ನಾಟಕದಲ್ಲಿ ಸಂಗೀತ ಮಾಸ್ತರ. ಹೇಮರಡ್ಡಿ ಮಲ್ಲಮ್ಮ ನಾಟಕದ ಪ್ರದರ್ಶನವಾಗುತ್ತಿತ್ತು. ಸುದೈವ ಮಾಸ್ತರರು ಇವರ ಮನೆಯ ಪಕ್ಕದಲ್ಲಿ ವಾಸಕ್ಕಿದ್ದರು. ಪರಿಚಯವಾಗಿ, ಎರಡು ಮೂರು ತಿಂಗಳಲ್ಲಿ ಆ ನಾಟಕದ ಸಂಗೀತದ ವಿವಿಧ ಪ್ರಕಾರಗಳನ್ನು ತಿಳಿದುಕೊಂಡೆ ಎಂಬಲ್ಲಿ ಅವರ ಮುಖದಲ್ಲಿ ಧನ್ಯತೆಯ ಭಾವ ಎದ್ದು ಕಾಣುತ್ತಿತ್ತು.

ಸೋದರಮಾವನಿಂದಲೂ ಸಂಗೀತ ಕಲಿತೆ ಎಂದರು. ಮುಂದೆ ಸಿತಾರ ವಾದಕರು ಹಾಗೂ ಸಂಗೀತ ವಿದ್ವಾಂಸರೂ ಆದ ಮುರನಾಳ ಮಠದ ಗಂಗಾಧರ ಸ್ವಾಮಿಗಳು ಅವರಲ್ಲಿ ಆರು ವರ್ಷಗಳವರೆಗೆ ಸಂಗೀತಾಭ್ಯಾಸ ಮಾಡಿದೆ ಎಂದ ಅವರು, 1960ರಲ್ಲಿ ಬೆಲಗಲ್‌ನಲ್ಲಿ ಹೆಮರಡ್ಡಿ ಮಲ್ಲಮ್ಮ ನಾಟಕದ ಮೂಲಕ ರಂಗಭೂಮಿ ಪ್ರವೇಶವಾಯಿತು ಎಂದರು. ಅದು ಯಶ ಪಡೆಯಿತು ಎಂದು ಹೇಳಿದರು.

ಸಂವಾದದಲ್ಲಿ ಭೀಮ-ಕೀಚಕರ ಪಾತ್ರದ ಸಂಭಾಷಣೆ ಅಭಿನಯದ ಮೂಲಕ ಪ್ರಾತ್ಯಕ್ಷಿಕೆ ನೀಡಿದರು. ಹೃದಯವತೆ ನಾ ಕಾಣೆ. ಮಮಜನನಿ ಸದಾ ಪ್ರೇಮ ಸದನಿ.. ಹೇಮರಡ್ಡಿ ಮಲ್ಲಮ್ಮ ನಾಟಕದ ಹಾಸ್ಯ ಪ್ರಸಂಗದ ಹಾಗೂ ಮಲ್ಲಿಕಾರ್ಜುನ ಪದ ಕರುಣಾ ಕುಲೀನನಾದೆ, ಆದೆ.. ಚಿದಾನಂದ ಬಡಿಗೇರ ಅವರ ಪ್ರಸ್ತುತಿಯ ರಂಗಗೀತೆ ಯಾವುದೋ ಪೌರಾಣಿಕ ನಾಟಕ ವೀಕ್ಷಿಸುತ್ತಿದ್ದೇವೆ ಎಂಬ ಭಾವ ಕೇಳುಗರಲ್ಲಿ ಮೂಡಿತು.

ಇಂದಿನ ಯುವ ಜನತೆ ರಂಗಭೂಮಿ ಆಸಕ್ತಿ ಹಾಗೂ ಸಲಹೆ ಕುರಿತ ರಮೇಶ ಟಿ.ಎಸ್ ಅವರ ಪ್ರಶ್ನೆಗಳು, ಸಮಗ್ರ ಮಾಹಿತಿ ತಿಳಿದುಕೊಳ್ಳಲು ಸಹಕಾರಿಯಾಯಿತು.

ನಾಟಕ ಮತ್ತು ಸಂಗೀತ ನಿರ್ದೇಶಕ ಇವರೀರ್ವರ ನಡುವಿನ ಪರಸ್ಪರ ಇರುವಿಕೆಯ ಸಾಮಂಜಸ್ಯತೆ ಕುರಿತ ಸಂತೋಷ ಕುಮಾರ್ ಉಪಾಧ್ಯಾಯ ಹಾಗೂ ನಾಟಕದ ಕಲಾವಿದರಿಗೆ ಸಮಯ ಪ್ರಜ್ಞೆ ಮತ್ತು ಅದನ್ನು ಮೈಗೂಡಿಸಿಕೊಳ್ಳುವ ಪರಿ ಕುರಿತ ಟಿ.ಎಂ. ಮೈಲಾರಪ್ಪ ಅವರ ಹಾಗೂ ಹಲವು ಪ್ರೇಕ್ಷಕರ ಪ್ರಶ್ನೆಗೆ ಚಿದಾನಂದ ಬಡಿಗೇರ ಅವರು ಸಕಾಲಿಕ ಹಾಗೂ ಮಾರ್ಮಿಕ ಉತ್ತರ ನೀಡಿದರು.

ಅಮರೇಶ ಅವರು ರಂಗಗೀತೆಯೊಂದಿಗೆ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದ ರೂವಾರಿ, ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಸ್ವಾಗತಿಸಿದರು. ಸಂತೋಷ ಉಪಾಧ್ಯಾಯ ಅವರು ತಾಂತ್ರಿಕ ಸಹಾಯ ಒದಗಿಸಿದರು. ಇಲಕಲ್ ರಂಗಕರ್ಮಿ ಮಹಾಂತೇಶ ಗಜೇಂದ್ರಗಡ್, ಇಲಕಲ್‌ನ ಬಸವ ಕೇಂದ್ರದ ಅಧ್ಯಕ್ಷ ಶಿವಾನಂದ ರೂಳಿ, ಮಹಾಂತೇಶ ಹಿರೇಮಠ ಸಹಯೋಗ ನೀಡಿದರು. ಜಯಶ್ರೀ ಬಸವರಾಜು ವಂದಿಸಿದರು.

***ಅಮರೇಶ ಎಚ್.ಎಸ್***

# ಬೀದಿ ನಾಟಕ ಸಮರ್ಥ ಅಭಿವ್ಯಕ್ತಿಯ ಮಾಧ್ಯಮ

## -ಡಾ. ರಾಜಪ್ಪ ದಳವಾಯಿ

ರಂಗಭೂಮಿಯಲ್ಲಿ ಬೀದಿ ನಾಟಕ ಮುಖ್ಯವಾಗಿದೆ. ಅನೇಕ ಜಾನಪದ ಪ್ರಕಾರಗಳ ಕಲಾ ಪ್ರದರ್ಶನಗಳು ಬೀದಿಯ ಮೇಲೆಯೆ ನಡೆಯುತ್ತಿರುತ್ತವೆ. ವೈಚಾರಿಕ ಪ್ರಣಾಳಿಯ ಮೂಲಕ ಅಭಿವ್ಯಕ್ತಿಯ ಕ್ರಮವನ್ನು ಸರಳಗೊಳಿಸುವುದು ಬೀದಿ ನಾಟಕ. ಯಾವುದೇ ಪ್ರಸಾದನವಿಲ್ಲದೇ, ವೇಷಭೂಷಣವಿಲ್ಲದೇ ಬೆಳಕಿನ ವಿನ್ಯಾಸವಿಲ್ಲದೇ ಹತ್ತಾರು ಜನರ ನಡುವೆ ಪ್ರದರ್ಶನ ನೀಡುವುದೇ ಬೀದಿ ನಾಟಕದ ಕ್ರಮವಾಗಿದೆ. ಬೀದಿ ನಾಟಕ ಬಹು ವ್ಯಾಪಕ ಹಾಗು ಸಮರ್ಥವಾದ ಅಭಿವ್ಯಕ್ತಿಯ ಮಾಧ್ಯಮ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ರಾಜಪ್ಪ ದಳವಾಯಿ ಅವರು ಹೇಳಿದರು. ಅವರು ನವದೆಹಲಿಯ 'ದಿನಕರ' ಫೌಂಡೇಶನ್ ಇವರು 22.12.2020 ರಂದು 'ನಿಸ್ತಂತು ಮಾಧ್ಯಮ'ದ ಮೂಲಕ ಆಯೋಜಿಸಿದ್ದ 'ಬೀದಿ ನಾಟಕ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದರು. ಪೂರ್ವ ತಯಾರಿಗೆ ಕಡಿಮೆ ಸಮಯ, ಆದರೂ ಪರಿಣಾಮ ಬೀರುವ ಮಾಧ್ಯಮ. ತಿಂಗಳಾನುಗಟ್ಟಲೇ ಇದಕ್ಕೆ ಪೂರ್ವ ತಯಾರಿ ಬೇಕಿರುವುದಿಲ್ಲ. ಖರ್ಚು-ವೆಚ್ಚದ ಬಾಬ್ತಿಲ್ಲ. ತಮ್ಮ ಅನುಭವದಲ್ಲಿ ಅಭಿವ್ಯಕ್ತಿ ಸಾಧ್ಯತೆಗಳನ್ನು ಇಟ್ಟುಕೊಂಡು ಅಭಿವ್ಯಕ್ತಿಸುವ ಒಂದು ಕ್ರಮ.

ಕನ್ನಡದಲ್ಲಿ ಅನೇಕರು ಬೀದಿ ನಾಟಕ ರಚಿಸಿದ್ದಾರೆ. ಹಲವರು ನಟ, ನಿರ್ದೇಶಕರಿದ್ದಾರೆ. ಬೀದಿ ನಾಟಕಗಳಿಗೆ ಅವರ ಬಹುದೊಡ್ಡ ಕೊಡುಗೆ ಇದೆ ಎಂದರು. ಸಾಮಾಜಿಕ ಪ್ರಜ್ಞೆ, ಜನಜಾಗೃತಿಗೆ ಬೀದಿ ನಾಟಕ ಕಾರಣವಾಗಿದೆ ಎಂದರು.

ಎಪ್ಪತ್ತರ ದಶಕದಲ್ಲಿ ಅದು ತುಂಬಾ ಮಹತ್ವ ಪಡೆದುಕೊಂಡಿತು. ಇಂದು ಅದರ ಸ್ವರೂಪ ಬೇರೆ-ಬೇರೆಯಾಗಿದೆ.

ಸರ್ಕಾರದ ಹಲವಾರು ಯೋಜನೆಗಳ ಕುರಿತಾಗಿ ಜನರಿಗೆ ತಿಳವಳಿಕೆ ಮೂಡಿಸುವ ದಿಸೆಯಲ್ಲಿ ಬೀದಿ ನಾಟಕದ ಪಾತ್ರ ಬಹು ಮುಖ್ಯ. ಬೀದಿ ನಾಟಕ ಜನಪರವಾದಂತಹ ಅಭಿವ್ಯಕ್ತಿಯ ಕ್ರಮ ಎಂದು ಹೇಳಿದರು. ಮೂರು ಸಾವಿರಕ್ಕೂ ಹೆಚ್ಚು ಬೀದಿ ನಾಟಕ ಕಲಾವಿದರೂ ರಾಜ್ಯದಲ್ಲಿದ್ದಾರೆ. ಒಂದು ಸಾವಿರಕ್ಕೂ ಹೆಚ್ಚು ಮಹಿಳಾ ಬೀದಿ ನಾಟಕ ಕಲಾವಿದರಿದ್ದಾರೆ. ಕೊಂಡಜ್ಜಿಯಲ್ಲಿ ಬೀದಿ ನಾಟಕ ಕಲಾವಿದರ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿತ್ತು ಎಂದ ಅವರು. 2020-21ರಲ್ಲಿ ಬೀದಿ ನಾಟಕಗಳ ಸ್ಪರ್ಧೆ ಏರ್ಪಡಿಸುವ ಯೋಜನೆ ಇದ್ದು, ಆ ಮೂಲಕ ಬೀದಿ ನಾಟಕಗಳನ್ನು ಕಟ್ಟುವ ಯೋಚನೆ ಹಾಗೂ ಯೋಜನೆ ರೂಪಿಸಿ, ಕಾರ್ಯಗತಗೊಳಿಸುವಲ್ಲಿ ಯೋಚಿಸಲಾಗುತ್ತಿದೆ ಎಂದು ಹೇಳಿದರು.

ಲೇಖಕಿ ಡಾ. ಅಹಲ್ಯಾಚಿಂತಾಮಣಿ ಅವರು ಬೀದಿ ನಾಟಕ ಪೂರ್ವ ತಯಾರಿ ಇತರ ವಿಷಯದ ಕುರಿತು ಕೇಳಿದ ಪ್ರಶ್ನೆಗೆ ಡಾ. ದಳವಾಯಿ ಅವರು, ತನ್ನದೇಯಾದ ರಂಗಭೂಮಿ ತಂತ್ರಗಳ ಮೂಲಕ ಅದಕ್ಕೆ ಬೇಕಾದ ತರಬೇತಿ, ಹಾಡು, ಗಾಯನ, ಪರಿಕರ ಒಳಗೊಂಡು ಬೀದಿ ನಾಟಕವಾಗುತ್ತದೆ ಎಂದರು.

ಕಾರ್ಯಕ್ರಮದ ಪರಿಕಲ್ಪನೆ ಮತ್ತು ಸಂಯೋಜನೆ ಮಾಡಿದವರು ದೆಹಲಿಯ ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರು.



ಡಾ. ರಾಜಪ್ಪ ದಳವಾಯಿ

ಎಸ್. ಕುಮಾರ ಹಾಗೂ ಅವರ ಪತ್ನಿ ನೇತ್ರಾ ಕುಮಾರ್, ಮಕ್ಕಳಾದ ಭಾಗ್ಯಶ್ರೀ ಕುಮಾರ್, ಜಯಶ್ರೀ ಕುಮಾರ್ ಅವರು ಬೀದಿ ನಾಟಕದ ಜಾಗೃತಿ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭಿಸಿದರು. ಎಸ್. ಕುಮಾರ್ ಕಾರ್ಯಕ್ರಮ ನಿರೂಪಿಸಿದರು. ದೆಹಲಿ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ಹಾಗು 'ದಿನಕರ'ದ ಕಲಾವಿದ ಸಂಗಪ್ಪ ವಗ್ಗರ್ ಅವರು ವಿಷಯಾಧಾರಿತ ಸಕಾಲಿಕ ಹಾಗು ಸಮರ್ಪಕ ಪ್ರಶ್ನೆ ಕೇಳಿ ಮೆರುಗು ನೀಡಿದರು. ರಮೇಶ್ ಟಿ.ಎಸ್. ಅವರು ತಾಂತ್ರಿಕ ಸಹಾಯ ನೀಡಿದರು. ದಿನಕರ ಫೌಂಡೇಶನ್ ಇವರಿಂದ ದೆಹಲಿಯಲ್ಲಿ ಬೀದಿ ನಾಟಕ ಪ್ರದರ್ಶನ ಮಾಡುವ ಇಚ್ಛೆ ಇದೆ, ಪೂರ್ಣಗೊಳ್ಳುವುದು ಭವಿಷ್ಯದ ಕಾಲಗರ್ಭದಲ್ಲಡಗಿದೆ. ಎಲ್ಲರೂ ಒಟ್ಟಾದಾಗ ಪ್ರದರ್ಶನ ನೀಡಲು ತಡವೇನು ಆಗುವುದಿಲ್ಲ ಎಂದು ಸಂತೋಷ ಕುಮಾರ ಉಪಾಧ್ಯಾಯ ಅವರು ಆಶಯ ವ್ಯಕ್ತಪಡಿಸಿ ವಂದಿಸಿದರು.

***ಅಮರೇಶ ಎಚ್.ಎಸ್***

# ನಾಟಕದಿಂದ ಸಿನೆಮಾ ರಂಗದವರೆಗಿನ ಪಯಣ ರೋಚಕ

## -ಕರಿಸುಬ್ಬು

ಏಚ್ಚಮ ನಾಯಕ ನಾಟಕದಲ್ಲಿ ಮೊದಲ ಪಾತ್ರ. ನಮಗೆ ರಂಗದ ಹಿಂದೆ ಕಾರ್ಯನಿರ್ವಹಿಸಲು ಆಸಕ್ತಿ, ಜೀವನದಲ್ಲಿ ಸಾರ್ಥಕ್ಯ ಭಾವನೆ ಇದೆ. ರಂಗಭೂಮಿ ಕಡೆಗೆ ಒಲವು. ಹೀಗೆ ರಂಗಭೂಮಿ, ಕಿರುತೆರೆ ಹಾಗು ಚಿತ್ರರಂಗದ ತಮ್ಮ ಅನುಭವಗಳನ್ನು ಡಾ. ವಿ. ಸುಬ್ರಮಣಿ-'ಕರಿಸುಬ್ಬು' ಅವರು ಹಂಚಿಕೊಂಡರು. ದಿನಾಂಕ 06.12.2020 ರಂದು ಝೂಮ್ ಮೀಟಿಂಗ್ ಮೂಲಕ ದೆಹಲಿಯ ದಿನಕರ ಫೌಂಡೇಶನ್ ಆಯೋಜಿಸಿದ 'ನಾಟಕ ರಂಗದಿಂದ ಚಿತ್ರರಂಗಕ್ಕೆ ಸಾಗಿ ಬಂದ ದಾರಿ' ಸಂವಾದದಲ್ಲಿ ಅವರು ಮಾತನಾಡುತ್ತಿದ್ದರು. ನಡೆಯುವಾಗ ನೆರಳು ನಮ್ಮನ್ನು ಹಿಂಬಾಲಿಸುವಂತೆ ನಮ್ಮ ಅನುಭವಗಳು ನಮ್ಮೊಂದಿಗಿರುತ್ತವೆ. ಛಲ ಇದ್ದು ಸಾಧಿಸಬೇಕು. ಕಲಿಕೆ ಪ್ರವಹಿಸುವ ಜಲದಂತೆ, ಅದು ನಿರಂತರವಿರಬೇಕು. ಪ್ರಯತ್ನದ ಜೊತೆಗೆ ಆತ್ಮ ವಿಶ್ವಾಸ ಬೆಳೆಸಿಕೊಳ್ಳಬೇಕು ಎಂದು ಯುವ ಪೀಳಿಗೆಗೆ ಕಿವಿಮಾತು ಹೇಳಿದರು. 'ಮಲ್ಲಿಕಾ' ತಂಡದ ಸಾಧನೆ, ರಂಗಭೂಮಿ ಹಾಗೂ ಚಲನಚಿತ್ರ ವೃತ್ತಿ ಬದುಕಿನ ಐದು ದಶಕಗಳ ಅನುಭವವನ್ನು ಹಂಚಿಕೊಂಡರು.

ಕರ್ನಾಟಕ ಭವನದ ಬಿ. ನಾರಾಯಣ ಅವರು ಸಂವಾದವನ್ನು ನಡೆಸಿಕೊಟ್ಟರು. ಹರಿಪ್ರಿಯ ಎಸ್ ನಿರೂಪಿಸಿದರು. ಮಮತಾ ಶಿವರಾಂ ಅವರು ವಂದಿಸಿದರು. ತಾಂತ್ರಿಕ ನಿರ್ವಹಣೆಯಲ್ಲಿ ರಮೇಶ ಟಿ.ಎಸ್. ಸಂವಾದಕ್ಕೆ ಪರಿಕಲ್ಪನೆ ಹಾಗೂ ನಿರ್ವಹಣೆ ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರದ್ದು, ಜಾನಪದ ತಜ್ಞ ನಾಡೋಜ ಮುದೇನೂರು ಸಂಗಣ್ಣ ಅವರ ಮರಿಮೊಮ್ಮಗಳಾದ 6ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ




ಡಾ. ವಿ. ಸುಬ್ರಮಣಿ (ಕರಿಸುಬ್ಬು)

ಹಗರಿಬೊಮ್ಮನಹಳ್ಳಿಯ ಕು. ಅನನ್ಯ ಸಿ ನುಡಿಸಿದ ಸ್ಯಾಕ್ಸೋಫೋನ್ ವಾದನ ಮೆಚ್ಚುಗೆ ಪಡೆಯಿತು. ಸಂತೋಷ ಕುಮಾರ್ ಉಪಾಧ್ಯಾಯ ಅವರು ಸಾರ್ಥಕ ಸಾಧನೆಯ ಹಿನ್ನೆಲೆಯಲ್ಲಿ ವೈಚಾರಿಕತೆ ಬೆಳೆಸಿಕೊಂಡ ಬಗೆಯ ಕುರಿತಾಗಿ ಪ್ರಶ್ನೆ ಕೇಳಿದರು.

***ಅಮರೇಶ ಎಚ್.ಎಸ್.***

# ಹಿರಿಯ ಕನ್ನಡಿಗ ಎನ್.ಎಂ. ಶೆಟ್ಟಿ ವಿಧಿವಶ



ಹಿರಿಯ ಕನ್ನಡಿಗ, ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀ ಎನ್.ಎಂ. ಶೆಟ್ಟಿ ಅವರು ದಿನಾಂಕ 06.12.2020 ರಂದು ನಿಧನರಾಗಿದ್ದಾರೆ.

ದೆಹಲಿಯ ಬಂಟ್ಸ್ ಕಲ್ಚರಲ್ ಅಸೋಸಿಯೇಶನ್‌ನ ಅಧ್ಯಕ್ಷರೂ ಆಗಿದ್ದ ಎನ್.ಎಂ. ಶೆಟ್ಟಿ ಅವರು ಕನ್ನಡ, ತುಳು ಸೇರಿದಂತೆ ವಿವಿಧ ಕನ್ನಡ ಸಂಘ ಸಂಸ್ಥೆಗಳ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದ್ದರು.

ಅಗಲಿದ ಹಿರಿಯ ಚೇತನ ಎನ್.ಎಂ. ಶೆಟ್ಟಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

## ಸಂತಾಪ

ದೆಹಲಿಯ ನನ್ನ ಎರಡು ದಶಕಗಳ ಬದುಕಿಗೆ ಬೆಂಬಲವಾಗಿ ನಿಂತವರು ಹಿರಿಯರಾದ ಶ್ರೀ ಎನ್ ಎಂ ಶೆಟ್ಟರು. ಕನ್ನಡ ಮತ್ತು ತುಳುವಿನ ಯಾವುದೇ ಕೆಲಸಗಳಲ್ಲಿ ಅವರು ಉತ್ಸಾಹದಿಂದ ಭಾಗವಹಿಸುತ್ತಿದ್ದರು. ದೆಹಲಿ ಕರ್ನಾಟಕ ಸಂಘದ ಬೆಳವಣಿಗೆಗೆ ಅವರ ಕೊಡುಗೆ ಅಪಾರ. ಅವರಿಂದು ನಸುಕಿನಲ್ಲಿ ನಮ್ಮನ್ನು ಬಿಟ್ಟು ಅಗಲಿದ್ದಾರೆ. ಅವರಿಗೆ ನಮನಗಳು.

***ಡಾ. ಪುರುಷೋತ್ತಮ ಬಿಳಿಮಲೆ***

ಎನ್.ಎಂ. ಶೆಟ್ಟಿ ಎಂದೇ ಚಿರಪರಿಚಿತರಾಗಿದ್ದ ನಿಟ್ಟೆ ಮುದ್ದಣ್ಣ ಶೆಟ್ಟಿ ಅವರು ದಿವಂಗತರಾದರೆಂಬ ಸುದ್ದಿ ನನ್ನ ಮನದಾಳದಲ್ಲಿ ವಿಷಾದದ ಅಲೆಗಳನ್ನೆಬ್ಬಿಸಿದೆ. ದೆಹಲಿಯ ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳಿಗೆ ಬೆನ್ನೆಲುಬಿನಂತಿದ್ದ ಶೆಟ್ಟರು ಅವರ ಜನ್ಮಸ್ಥಳ ನಿಟ್ಟೆಗೆ ನೀಡಿರುವ ಕಾಣಿಕೆ ನಿಜಕ್ಕೂ ಅನನ್ಯವಾದುದು. ಸಜ್ಜನರೂ ಸುಸಂಸ್ಕೃತರೂ ಆಗಿದ್ದ ಅವರ ಅಗಲಿದ ಆತ್ಮಕ್ಕೆ ಚಿರಶಾಂತಿ ಕೋರುವೆ.

***ಆರ್. ಭರತಾದ್ರಿ***
ಬೆಂಗಳೂರು

## ಸುರೇಶ್ ಎಚ್.ಎಲ್. ನಿಧನ




ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀ ಸುರೇಶ್ ಎಚ್.ಎಲ್. ಅವರು ದಿನಾಂಕ 26.12.2020 ರಂದು ನಿಧನರಾಗಿದ್ದಾರೆ.

ಅವರು ದೆಹಲಿಯ ವಸಂತ್‌ಕುಂಜ್‌ನಲ್ಲಿರುವ ಪೂರ್ಣಪ್ರಜ್ಞಾ ಪಬ್ಲಿಕ್ ಸ್ಕೂಲ್‌ನ ಆಡಳಿತ ಮಂಡಳಿಯಲ್ಲಿ ಉಪಾಧ್ಯಕ್ಷರಾಗಿ ಸತತ ಎಂಟು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು.

ಅಗಲಿದ ಸುರೇಶ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

## ರೋಶನ್ ಕೆ. ನಿಧನ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀ ರೋಶನ್ ಕೆ. ದಿನಾಂಕ 01.01.2021 ರಂದು ನಿಧನರಾಗಿದ್ದಾರೆ.

ಅವರು ದೆಹಲಿ ಕನ್ನಡ ಶಾಲೆಗೆ ಭದ್ರತಾ ಸಿಬ್ಬಂದಿಗಳನ್ನು ಒದಗಿಸುವಲ್ಲಿ ಸಹಕರಿಸುತ್ತಿದ್ದರು.

ಅಗಲಿದ ರೋಶನ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

## ಎಸ್.ಎನ್. ಹನುಮಂತಪ್ಪ ನಿಧನ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀ ಎಸ್. ಎನ್. ಹನುಮಂತಪ್ಪ ಅವರು ದಿನಾಂಕ 06.01.2021 ರಂದು ನಿಧನರಾಗಿದ್ದಾರೆ.

ಅವರು ದೆಹಲಿಯ ಕರ್ನಾಟಕ ಭವನದಲ್ಲಿ ಸ್ವಾಗತಕಾರರಾಗಿ ಕಳೆದ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು.

ಅಗಲಿದ ಎಸ್.ಎನ್. ಹನುಮಂತಪ್ಪ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.




ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ
ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.
ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ
ಕಾರ್ಯಾಲಯವನ್ನು ಸಂಪರ್ಕಿಸಿರಿ.
ದೂರವಾಣಿ : 011–26109615 / 26104818

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ಹೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ಧವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ.
ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020

Ph : 40520770
M : 9811104398, 9811604398

Delhi Karnataka Sangha Abhimata
Jan-2021, Vol. No.31, Issue No. 4, Price Rs.1/-
RNI Regn. No. 53405/91, DL-SW-1/4016/19-21
Date of Publication : Jan 8th / 9th, Posting Date : 10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ
ಇರುವ ಕಲಾವಿದೆ ಕಾವೇರಿ ಪೂಜಾರ ಅವರ ಕಲಾಕೃತಿ

